ist ed No. M. 1393.

doc-41
T.P-8

ಕಾಲಾಣೆ

ಕಂಠೀರವ

KANTEERAVA

KANARESE, BI-WEEKLY

ESTD. 1919 ಸ್ಥಾಪನೆ.

ಸಂಪುಟ ೨೩ | ಮಂಗಳೂರು, ೧೯೪೧ನೇ ಇಸವಿ ಒಕ್ಟೋಬರ ತಾರೀಕು ೩ನೇ ಶುಕ್ರವಾರ | ಸಂಚಿಕೆ ೫೩

VOL. XXIII | MANGALORE, FRIDAY, OCTOBER 3, 1941 | NO. 53

ಬಲ್ಗೇರಿಯಕ್ಕೆ ಕೊನೆಯ ಎಚ್ಚರಿಕೆ!

"ರಷ್ಯಕ್ಕೆ ಬಲ್ಗೇರಿಯದ ಸೇನೆಗಳನ್ನು ಕಳುಹಿಸಲೇಬೇಕು; ಇಲ್ಲವಾದರೆ ಬಲ್ಗೇರಿಯ ಬರ್ಲಿನಿನೊಡನೆ ಮಾಡಿಕೊಂಡ ಸಂಧಿಯನ್ನು ಏಾರಿತೆಂದು ಭಾವಿಸಿ ಬಲ್ಗೇರಿಯವನ್ನು ಆಕ್ರಮಿಸಲಾದೀತು"—ಹೀಗೆಂದು ಜರ್ಮನಿ ಬಲ್ಗೇರಿಯಕ್ಕೆ ಕೊನೆಯ ಎಚ್ಚರಿಕೆ ಹೇಳಿರುವುದಾಗಿ ವಾರ್ತೆ.

ಬಲ್ಗೇರಿಯದವರು ಕೂಡಲೇ ೧೫೦,೦೦೦ ಮಂದಿಯನ್ನು ರಷ್ಯದ ರಣರಂಗಕ್ಕೆ ಕಳುಹಿಸಬೇಕೆಂದು ಜರ್ಮನಿಯ ಒತ್ತಾಯ. ಅಲ್ಲದೆ ಬಲ್ಗೇರಿಯದ ಹಡಗುಗಳನ್ನೂ ಏವಾನ ನಿಲ್ದಾಣಗಳನ್ನೂ ತಮ್ಮ ಉಪಯೋಗಕ್ಕೆ ಬಿಟ್ಟುಕೊಡಬೇಕೆಂದೂ ಜರ್ಮನರು ಬಲ್ಗೇರಿಯದವರ ಪ್ರಾಣ ಹಿಂಡುತ್ತಿದ್ದಾರೆ. ಆದರೆ ಬಲ್ಗೇರಿಯಾ ಮಂತ್ರಿಮಂಡಲವು ತಾವು ರಷ್ಯದ ಮೇಲೆ ಮಾತ್ರ ಯುದ್ಧ ಮಾಡಲಾರೆವಾಗಿ ಜರ್ಮನಿಯವರಲ್ಲಿ ಅರಿಕೆ ಮಾಡಿಕೊಂಡಿರುವದೆಂದು ಹೇಳಲಾಗಿದೆ.

ಇಟೆಲಿ, ರುಮೇನಿಯಾ, ಹಂಗೇರಿ, ಸ್ಲಾವೋಕಿಯಗಳಿಂದಲೂ ಜರ್ಮನಿ ಸೇನಾಸಹಾಯವನ್ನು ಅಪೇಕ್ಷಿಸಿರುವುದಂತೆ. ೧॥ ಲಕ್ಷ ಹಂಗೆರಿಯನರು, ೧ ಲಕ್ಷ ರುಮೇನಿಯನರು, ೧ ಲಕ್ಷ ಸ್ಲಾವೋಕಿಯನರು, ೫ ಲಕ್ಷ ಇಟೆಲಿಯವರು ತಮ್ಮ ಸಹಾಯಕ್ಕೆ ಕಳುಹಿಸಲ್ಪಡಬೇಕೆಂದು ಜರ್ಮನಿಯವರ ಆಗ್ರಹ.

ಜೆಕೋಸ್ಲಾವೋಕಿಯದ ವಿದ್ಯಮಾನಗಳು

ಜೆಕೋಸ್ಲಾವಿಯದಲ್ಲಿ ಒಳಸಂಚು, ದಂಗೆ ಮುಂತಾದವುಗಳ ದೆಸೆಯಿಂದ, ಅಲ್ಲಿ ಎರಡೂವರೆ ವರ್ಷಗಳಿಂದ ನಾಜಿ ರಕ್ಷಕನಾಗಿರುತ್ತಿದ್ದ ೩೮ ವರುಷ ಪ್ರಾಯದ ಬ್ಯಾರನ್ ವಾನ್ ನ್ಯೂರೆತ್ ಎಂಬಾತನು ತನ್ನ ಕಾರ್ಯಭಾರವನ್ನು ಬ್ಲಾಕ್‌ಗಾರ್ಡ್ ದಳದ ಒಬ್ಬ ತರುಣ ನಾಯಕನಿಗೊಪ್ಪಿಸಿಕೊಟ್ಟಿದ್ದಾನೆ; ಈ ನಾಯಕನು "ಗೆಸ್ಟೆಪೋ" ದಳದಲ್ಲಿ ಎರಡನೆ ಅಧಿಪತಿ. ಅವನ ಹೆಸರು ಧೈನ್‌ಹಾರ್ಡ್ ಹೈಡ್ರಿಚ್. ಈತನೀಗ ಬೊಹೀಮಿಯಾ, ಮೋರೇವಿಯಗಳಲ್ಲಿನ ಆರು ಜಿಲ್ಲೆಗಳಲ್ಲಿ ಜರೂರುಯ್ಯಾತಿನ ಕಾರ್ಯಕ್ರಮಗಳನ್ನು ಕೈಕೊಂಡಿದ್ದಾನೆ. ನಾಜಿ ಆಡಳಿತಕ್ಕೆ ವಿರೋಧಿಗಳಾಗಿರುವರೆಂದು ಸಂಶಯ ಬಂದವರನ್ನೆಲ್ಲ ನಿರ್ಮೂಲಿಸುವುದೇ ಆ ಕಾರ್ಯಕ್ರಮದ ಉದ್ದೇಶ. ಇದರ ಪರಿಣಾಮವಾಗಿ ಅಲ್ಲಿ ಹಲವರ ವಿಚಾರಣೆಯೆ ಇಲ್ಲದೆ, ವಧಾಕಾರ್ಯವು ನಡೆಯಬಹುದಾಗಿದೆ. ಇಷ್ಟರ ನಡುವೆ, ನಾಜಿಗಳ ನೇಮಕಾದ ಸ್ಲೋವೋಕಿಯಾ ಪ್ರಧಾನರಾದ ಡಾ। ತುಕರವರ ಮೇಲೆ ಪ್ರಾಣಾಪಹಾರದ ಪ್ರಯತ್ನವನ್ನೂ ಯಾರೋ ನಡೆಸಿರುವರೆಂದೂ ವಾರ್ತೆ.

ಜೆಕೋಸ್ಲಾವೋಕಿಯದ ಹಲವು ಫ್ಯಾಕ್ಟರಿಗಳಲ್ಲಿ ಮುಷ್ಕರಗಳು ಉಂಟಾಗಿ ಗೆಸ್ಟೆಪೋ ದಳದವರು ಹಲವರನ್ನು ಕೈದು ಮಾಡಿದ್ದಾರೆ. ಗುಂಡು ಹಾರಿಸಿ ಕೊಲ್ಲುತ್ತೇವೆಂದೂ ಬೆದರಿಸುತ್ತಿದ್ದಾರೆ. "ವಿ" ಸೌಂಜ್ಞೆಗಳು ಜೆಕ್ ನಗರಗಳಲ್ಲಿ ಈಗ ಎಲ್ಲೆಲ್ಲಿಯೂ ಕಂಡುಬರುತ್ತಿವೆ.

ರಷ್ಯದ ಮಧ್ಯ ರಣಾಂಗಣದಲ್ಲಿ ರಷ್ಯದವರ ವಿಜಯ

ಕ್ರಿಮಿಯದ ಬಳಿ ಜರ್ಮನರು ಅಸಾಧ್ಯ ಯುದ್ಧಸಿದ್ಧತೆ ಮಾಡುತ್ತಿದ್ದಾರೆ. ಬೇಗನೇ ಅವರು ನೌಕಾ ಮತ್ತು ವಿಮಾನದಾಳಿಗಳ ಮೂಲಕ ಕ್ರಿಮಿಯವನ್ನು ಹಿಡಿಯಲು ನೋಡಬಹುದು.

ಮಧ್ಯರಣರಂಗದಲ್ಲಿ ರಷ್ಯದವರು ೧೦ ಹಳ್ಳಿಗಳನ್ನು ಜರ್ಮನರಿಂದ ಪುನಃ ಕಿತ್ತುಕೊಂಡರು. ಅಲ್ಲದೆ ಬಾಲ್ಟಿಕಿನಲ್ಲಿ ರಷ್ಯದ ನೌಕಾಬಲವು ಶತ್ರುಗಳ ೮ ಮತ್ತು ೫ ಸಾವಿರ ಟನ್‌ಗಳ ಎರಡು ಸಾಗಾಟದ ಹಡಗುಗಳನ್ನೂ ಮುಳುಗಿಸಿತು. ಇತ್ತ ಲೆನಿನ್‌ಗ್ರಾಡ್ ಕ್ಷೇತ್ರದಲ್ಲಿ ರಷ್ಯದವರ ಪ್ರತಿಭಟನೆ ಜೋರಾಗುತ್ತ ಅವರ ಮರುದಾಳಿಗಳು ಜರ್ಮನರನ್ನು ಹಿಂದಕ್ಕೆ ಅಟ್ಟುತ್ತಿವೆ. ಕಾಖೋವ್ಕಿನಲ್ಲಿಯೂ ರಷ್ಯದವರ ರಕ್ಷಣಾಕಾರ್ಯಗಳು ತೃಪ್ತಿಕರವಾಗಿವೆ.

ರಷ್ಯಾ ಯುದ್ಧದ ೧೫ನೇ ವಾರ

ರಷ್ಯಾ-ಜರ್ಮನಿಗಳ ಯುದ್ಧಾರಂಭವಾಗಿ ೧೫ ವಾರಗಳು ಕಳೆಯಿತು. ಮಿಲ್ಯಾಂತರ ಮಂದಿ ರಷ್ಯದವರೀ ಯುದ್ಧದಲ್ಲಿ ವೀರಾವೇಶದಿಂದ ಹೋರಾಡುತ್ತಿದ್ದು, ನೆಲವನ್ನೂ, ಜನವನ್ನೂ ಕಳೆದುಕೊಂಡರೂ ಅವರ ಪ್ರತಿಭಟನೆಯ ಸ್ಫೂರ್ತಿ ಕಡಿಮೆಯಾಗಿಲ್ಲ. ಸದ್ಯ ಒಡೆಸ, ಲೆನಿನ್‌ಗ್ರಾಡುಗಳು ಸಾಮಾನ್ಯಕ್ಕೆ ಬಿಟ್ಟು ಕೊಡುವ ಹಾಗಿಲ್ಲವೆಂಬುದು ಸಂತೋಷದ ಮಾತು.

ಶ್ರೀ। ಎ. ವಿ. ಥಕ್ಕರರ ಜಿಲ್ಲಾ ಸಂಚಾರ

ಮೊದಲೇ ಪ್ರಕಟಿಸಲಾದ ಕಾರ್ಯಕ್ರಮದಂತೆ, ಅ. ಭ. ಹರಿಜನ ಸೇವಕ ಸಂಘದ ಜನರಲ್ ಸೆಕ್ರೆಟರಿಗಳಾದ ಶ್ರೀ। ಎ. ವಿ. ಥಕ್ಕರರು ಈ ಜಿಲ್ಲೆಯ ಹಲವು ಹರಿಜನ ಶಾಲೆ, ಸಂಸ್ಥೆಗಳನ್ನು ಸಂದರ್ಶಿಸಿ, ಕಾಸರಗೋಡು, ಮಂಗಳೂರು, ಉಡುಪಿ ಮೊದಲಾದ ಕಡೆ ನಡೆದ ಹಲವು ಸಭೆಗಳಲ್ಲಿ ಭಾಗವಹಿಸಿ, ಹರಿಜನರ ಉನ್ನತಿಯ ಕುರಿತು ಉಪಯುಕ್ತ ಸೂಚನೆಗಳುಳ್ಳ ಭಾಷಣಗಳನ್ನು ಕೊಟ್ಟು ಎಲ್ಲ ಕಡೆಗಳಲ್ಲಿಯೂ ಹೃತ್ಪೂರ್ವಕವಾದ ಸ್ವಾಗತ ಸತ್ಕಾರಗಳ ಸನ್ಮಾನ ಪಡೆದು ಮರಳಿದರು.

ಹರಿಜನ ವಾರ

ಕಳೆದ ತಾ. ೨೪ರಿಂದ ನಿನ್ನೆಯ ವರೆಗೆ ನಡೆದ "ಹರಿಜನ ವಾರ"ದ ಆಚರಣೆಯು ಈ ಮೊದಲು ಪ್ರಕಟವಾದಂತೆ, ಸಾರ್ವಜನಿಕ ಭಾಷಣ, ಸಂದರ್ಶನ ಇತ್ಯಾದಿ ಕಾರ್ಯಕ್ರಮಗಳೊಡನೆ ಮುಕ್ತಾಯವಾಯಿತು. ಹರಿಜನೋದ್ಧಾರ ಕಾರ್ಯದಲ್ಲಿ ಸಾರ್ವಜನಿಕರ ಬೆಂಬಲವನ್ನು ದೊರಕಿಸಿಕೊಳ್ಳಲು ನಿರಂತರವೂ ಶ್ರಮಿಸುತ್ತಿರುವವರಲ್ಲಿ ಡಾ। ಅಡಪರ ಹಾಗೂ ಶ್ರೀ। ಕಿಲ್ಲೆಯವರ ಹೆಸರುಗಳನ್ನು ಪ್ರತ್ಯೇಕವಾಗಿ ಉಲ್ಲೇಖಿಸಿ, ಈ ಸಂದರ್ಭದಲ್ಲಿ, ಅವರನ್ನು ಅವರ ಕಾರ್ಯತತ್ಪರತೆಯ ಎಚಾರದಲ್ಲಿ ವಿಶೇಷವಾಗಿ ಪ್ರಶಂಸಿಸದಿರಲಾಗದು.

ವಿದ್ಯಾಂಗದ ಡ್ಯಾರೆಕ್ಟರರ ಸಂಚಾರ

ನಮ್ಮ ಆಧಿಪತ್ಯದ ವಿದ್ಯಾಂಗದ ಡೈರೆಕ್ಟರ್ ಮಿ। ಸ್ಟಾಫೆಮ್‌ರು ಮಂಗಳೂರಿಗೆ ದಯೆಮಾಡಿಸಿ, ಇಲ್ಲಿನ ವಿದ್ಯಾಧಿಕಾರಿಗಳೊಡನೆ ವಿದ್ಯಾ ವಿಷಯಗಳನ್ನು ಚರ್ಚಿಸಿ, ಕುಂದಾಪುರಕ್ಕೆ ತೆರಳಿರುವರು. ಅಲ್ಲಿ ಮೂರು ದಿನಗಳಿದ್ದು ಅನಂತರ ಅವರು ಮರಳುವೆಂದು ತಿಳಿದುಬಂದಿದೆ.

To meet WAR TIME orders FIXED DEPOSITS IN CASH

repayable after 3, 6, 9, 12 & 24 months

at 4, 4½, 5, 6 & 7½% interest respectively (interest - paid quarterly) are accepted by

CALICUT HOSIERIES, LTD.,

(ESTD. 1936) CHALAPURAM POST. (Malabar.)

List will remain open only for one month and will close immediately the required amount of Deposits are received.

Apply with 0—2—0 postage stamps for rules and application form at once to Managing Agents.

N. B. Special Rates for Deposits for sums over Rs. 5000/-

ಶ್ರೀಯುತ ಥಕ್ಕರರಿಗೆ
ಮಂಗಳೂರು ಮು। ಕೌನ್ಸಿಲಿನವರ ಮಾನಪತ್ರ

ಕಳೆದ ತಾ. ೨೭ನೇ ಶನಿವಾರ ಬೆಳಿಗ್ಗೆ ಗಂಟೆ ೯ಕ್ಕೆ ಸರಿಯಾಗಿ ಸ್ಥಳೀಯ ಮುನಿಸಿಪಲ್ ಆಫೀಸಿನಲ್ಲಿ ನಮ್ಮ ಮು। ಕೌನ್ಸಿಲಿನವರು, ಹರಿಜನ ಸೇವಕ ಸಂಘ (ಡೆಲ್ಲಿ)ದ ಜನರಲ್ ಸೆಕ್ರೆಟರಿಯವರಾದ ಶ್ರೀಯುತ ಎ. ।ವಿ. ಥಕ್ಕರರಿಗೆ ಒಂದು ಮಾನಪತ್ರವನ್ನು ಸಮರ್ಪಿಸಿದರು.

ಕೌನ್ಸಿಲಿನ ಚೆಯರ್‌ಮ್ಯಾನರಾದ ಶ್ರೀ। ಬಿ. ವೆಂಕಟರಾಯ ಬಾಳಿಗ ಎಂ. ಎಲ್. ಎ. ಅವರು ಈ ವಿಶೇಷ ಅತಿಥಿಗಳಿಗೆ ಸ್ವಾಗತ ಬಯಸಿ, ಮಾನಪತ್ರವನ್ನೋದಿ ಒಪ್ಪಿಸಿ, ಅವರನ್ನು ಹೂಮಾಲೆಯಿಂದ ಮನ್ನಿಸಿದರು.

ಮಾನಪತ್ರದಲ್ಲಿ, ಶ್ರೀ। ಥಕ್ಕರರು ಭಾರತದ ಹರಿಜನರಿಗಾಗಿ ಸಮರ್ಪಿಸಿದ ಸೇವೆಯನ್ನು ಶ್ಲಾಘಿಸಿ ಮಹಾತ್ಮಾಜಿಯವರು ಅವರನ್ನು "ಹರಿಜನರ ಪಿತ"ನೆಂದು ಕರೆದುದ್ದು ಸರಿ ಎಂದು ಸಮರ್ಥಿಸಲಾಗಿತ್ತು. ಈ ಜಿಲ್ಲೆಯಲ್ಲಿ ಹರಿಜನರ ಉನ್ನತಿಗೆ ಅಸ್ತಿವಾರ ಹಾಕಿಕೊಟ್ಟ ದಿವಂಗತ ಕುದ್ಮುಲ್ ರಂಗ ರಾವ್ ಅವರು, ಸಮಾಜ ಬಹಿಷ್ಕಾರಕ್ಕೂ ಬೆದರದೆ, ಇಡೀ ತಮ್ಮ ಜೀವಮಾನವನ್ನೇ ಹೇಗೆ ಆ ಪತಿತ ಜನವರ್ಗಕ್ಕಾಗಿ ಧಾರೆ ಎರೆದಿದ್ದರು, ನಿರಂತರವೂ ಶ್ರಮಿಸಿದ್ದರು ಎಂದು ಪ್ರಸ್ತಾವಿಸಲಾಗಿತ್ತು. ಅಷ್ಟೇ ಅಲ್ಲದೆ, ಈ ಮುನಿಸಿಪಾಲಿಟಿ ಹರಿಜನರಿಗೆ ಉಪಾಧ್ಯಾಯ, ಪೇದೆಯರ ಕೆಲಸ ಕೊಟ್ಟೂ, ತೋಟಗಳಿಗೆ ಪರಮಾವಧಿಯ ಸಂಬಳವಿತ್ತೂ, ತಮ್ಮ ಶಾಲೆಗಳ ಹರಿಜನ ವಿದ್ಯಾರ್ಥಿಗಳಿಗೆ ಉಚಿತವಾಗಿ ಸ್ಲೇಟು ಪುಸ್ತಕಗಳನ್ನು ಒದಗಿಸಿಯೂ, ಡಿ. ಸಿ. ಮಿಶನ್, ಹರಿಜನ ಸೇವಕ ಸಂಘಕ್ಕೆ ದ್ರವ್ಯಸಹಾಯ ಕೊಡುವಂತೆ ಬಜೆಟಿನಲ್ಲಿ ಅವಕಾಶ ಕಲ್ಪಿಸಿಯೂ, ಹೆಂಗಸು ತೋಟಗಳಿಗೆ ಹರಿಗೆಯ ರಜೆ ಇತ್ಯಾದಿಗಳನ್ನು ಏರ್ಪಡಿಸಿಯೂ ಇರುವ ಅಂಶಗಳನ್ನು ಈ ಮಾನಪತ್ರದಲ್ಲಿ ನಮೂದಿಸಲಾಗಿದ್ದಿತಲ್ಲದೆ, ಈಚಿಗೆ ಮಂಗಳೂರಲ್ಲಿ ನಡೆದ ಮಿಶ್ರ ಭೋಜನದ ವಿಚಾರದಲ್ಲಿ ಸಾರ್ವಜನಿಕರು ತೋರಿದ ಆಸಕ್ತಿಯೆಷ್ಟೆಂದೂ ಶ್ರುತಪಡಿಸಿ ಹಾಗೆ ಒಟ್ಟಿನಲ್ಲಿ ಈ ನಗರದವರು ಹರಿಜನೋದ್ಧಾರದ ವಿಷಯದಲ್ಲಿ ಎಷ್ಟು ಶ್ರದ್ಧೆಯನ್ನು ನಿರ್ವಹಿಸಿದ್ದಾರೆ, ಹರಿಜನರ ಸಾಮಾಜಿಕ ಸ್ಥಾನಮಾನಗಳನ್ನು ಹೆಚ್ಚಿಸುವಲ್ಲಿ ಹೇಗೆ ನೆರವಾಗಿದ್ದಾರೆ ಎಂದೂ ನಿವೇದಿಸಲಾಗಿತ್ತು.

ಶ್ರೀ। ಥಕ್ಕರರು ತಮಗಿತ್ತ ಈ ಸನ್ಮಾನಕ್ಕಾಗಿ ವಂದಿಸಿ "ನಾನು 'ಪಿತ' ನೆಂದಲ್ಲ, 'ಹರಿಜನ ಸೇವಕ'ನೆಂದೇ ಕರೆಯಲ್ಪಡಲು ಬಯಸುತ್ತೇನೆ. ದಿವಂಗತ ರಂಗರಾಯರ ಹೆಸರನ್ನು ನಾನು ಚಿಕ್ಕಂದಿನಲ್ಲೇ ಬೊಂಬಯಿಯಲ್ಲಿ ದಿ॥ ಚಂದವರ್‌ಕಾರರ ಬಾಯಿಯಿಂದ ಹಲವು ಬಾರಿ ಕೇಳಿದ್ದೇನೆ. ಅವರು ಹರಿಜನರಿಗಾಗಿ ಅತ್ಯುತ್ತಮ ಕಾರ್ಯಗಳನ್ನು ನಡೆಸುತ್ತಿದ್ದರೆಂಬ ಕೀರ್ತಿ ಆಗಲೇ ಹಬ್ಬಿತ್ತು. ನೀವು ಹರಿಜನ ತೋಟಗಳಿಗಾಗಿ, ಕಸ ಗುಡಿಸುವವರಿಗಾಗಿ ಕೊಟ್ಟಿರುವ ಕೊಡುತ್ತಿರುವ ಪ್ರೋತ್ಸಾಹದ ವಿಚಾರ ಕೇಳಿ ಬಹು ಸಂತೋಷವಾಯಿತು" ಎಂದರು.

ಕಕ್ಕುಸಗಳನ್ನು ನಿರ್ಮಲವಾಗಿ ಇರಿಸುವುದರಿಂದಲೂ, ಕಶ್ಮಲಗಳನ್ನು ಕೈಗಾಡಿಗಳಲ್ಲಿ ಒಯ್ಯುವಂತೆ ಏರ್ಪಡಿಸುವುದರಿಂದಲೂ ತೋಟಗಳಿಗೆ ಉಂಟಾಗುವ ಉಪಕಾರವೆಷ್ಟೆಂದು ಅವರು ವಿವರಿಸಿದರು. ಮುನಿಸಿಪಲ್ ಹರಿಜನ ಉದ್ಯೋಗಿಗಳು ಬೇರೆ ಕಡೆ ಹೇಗೆ ವಿಪರೀತ ಬಡ್ಡಿ ತೆತ್ತು ಸಾಲಗಾರರ ಹಿಂಸೆಗೆ ಗುರಿಯಾಗುತ್ತಿರುವರೆಂಬ ಅಂಶವನ್ನು ಸೂಚಿಸುತ್ತ, ಈ ಸ್ಥಳದಲ್ಲಿ ಅವರಿಗೊಂದು "ಸಹಕಾರಿ ಸಾಲದ ಸಂಘ" ವಿದೆಯೆಂದೂ, ಅಲ್ಲಿ ಅವರ ಸಂಬಳದ ಮೂರು ಪಾಲಷ್ಟು ಸಾಲ ಸಿಗುವುದೆಂದೂ, ಈಗಾಗಲೇ ಅವರಿಗೆ ತಿಂಗಳೊಂದರ ೧ ರೂಪಾಯಿಯ ತುಟ್ಟಿ ಭತ್ತೆ ಸಲ್ಲುವಂತೆ ಏರ್ಪಾಡಾಗಿರುವುದೆಂದೂ ಕೇಳಿ ತಿಳಿದು ತಮ್ಮ ಅಪಾರ ಸಂತೋಷ ವ್ಯಕ್ತಪಡಿಸಿದರು.

ಹರಿಜನರ ವಸತಿ ಗೃಹಗಳು ಮಧುರೆ, ಗುಂಟೂರುಗಳಲ್ಲಿ, ಅಹಮ್ಮದಾಬಾದಿನಲ್ಲಿ ಎಷ್ಟು ಸುಂದರವಾಗಿ ಕಟ್ಟಲ್ಪಟ್ಟಿವೆ ಎಂಬುದನ್ನು ವಿವರಿಸಿ ಅದೇ ಮೇಲ್ಪಂಕ್ತಿಯನ್ನು ಈ ಮುನಿಸಿಪಾಲಿಟಿಯವರೂ ಅನುಸರಿಸಿದರೆ ಚೆನ್ನಾಗಿದ್ದೀತೆಂದರು.

ಇಂದಿನ ಈ ಸಮಾರಂಭಕ್ಕೆ ಶ್ರೀ। ಗಳಾದ ಎ. ಬಿ. ಸೆಟ್ಟಿ, ಎಂ. ಎಲ್. ಎ., ಎಂ. ವೆಂಕಟೇಶ ಪೈ, ಸಿ. ಪಿ. ಸಿ. ಮ್ಯಾ। ಡ್ಯಾ. ಕುಡ್ಪ, ಎಂ. ಎಸ್. ಮಾಧವ ರಾವ್, ಎಂ. ರಾಮಕೃಷ್ಣ ಪೂಂಜ ಮೊದಲಾದ ಇತರ ಆಢ್ಯ ಗೃಹಸ್ಥರೂ ಆಮಂತ್ರಿತರಾಗಿ ದಯೆಮಾಡಿಸಿದ್ದರು.

Oriental Govt. Security Life Assurance Company, Limited.

ಈ ಕಂಪೆನಿಯಿಂದ ಕೊಡೋಣಾದ ಶ್ರೀ। ಡಿ. ಯಿ. ಕುವೆಲರ ಜೀವ ವಿಮೆಯ ನಂಬ್ರ 39163ನೇ ಪೊಲಿಸಿಯು ಕಳೆದು ಹೋಗಿದ್ದು ಸದ್ರಿ ಪೊಲಿಸಿಯ Surrender Valueವನ್ನು ವಿಮೆದಾರರಿಗೆ ಕೊಟ್ಟು ಸದ್ರಿ ಪೊಲಿಸಿಯನ್ನು ಕಂಪೆನಿಯವರು ರದ್ದು ಮಾಡಲಿಕ್ಕೆ ಆಲೋಚಿಸಿರುವದರಿಂದ ಸದ್ರಿ ಆಲೋಚನೆ ನೆರವೇರಿಸುವದರಲ್ಲಿ ಆಕ್ಷೇಪ ಮಾಡಲಿಕ್ಕಿರುವವರು ಈ ತಾರೀಕಿನಿಂದ ಒಂದು ತಿಂಗಳ ವಳಗೆ ಕಂಪೆನಿಯವರಿಗೆ ಬರಿಯ ಬೇಕಾಗಿ ಈ ಮೂಲಕ ತಿಳಿಸೋಣಾಗಿಯದೆ. ಈ ವಾಯಿದೆಯ ನಂತರ ತಲಪಬಹುದಾದ ಹಕ್ಕು ವ ಆಕ್ಷೇಪಣೆಗಳು ಅಂಗೀಕರಿಸೋಣಾಗದೆ ನಿಷ್ಪ್ರಯೋಜನಕರವಾಗಿರುವವು.

(Sd.) H. E. Jones
Manager.

Bombay 3—10—1941

ಈ ಹೆಸರಿದೆಯೇನೋ ನೋಡಿ

EVEREADY
TRADE-MARK

ನಿಮ್ಮ

ಇವು ಮೂರನ್ನೂ ಒಟ್ಟಿಗೆ ಉಪಯೋಗಿಸಿದಲ್ಲಿ ಹೆಚ್ಚು ಕಾಲ-ಹೆಚ್ಚು ಪ್ರಕಾಶಮಾನವಾದ ಬೆಳಕು ಸಿಗುವುದು

ಕುಂದಾಪುರ
ಸಂಸ್ಕೃತ ಶಾಲೆಯ ಆರಂಭೋತ್ಸವ

ಇದೇ ಕಳೆದ ೨೬ನೇ ಶುಕ್ರವಾರ ಇಲ್ಲಿಯ ಶ್ರೀ ಕೋಟೇಶ್ವರ ಕ್ಷೇತ್ರದಲ್ಲಿ, ವೈದಿಕ ಧರ್ಮಪ್ರಕಾಶಕ ಸಂಘದವರ ಆಶ್ರಯದಿಂದ, ನೂತನವಾಗಿ ಸಂಸ್ಕೃತ ಶಾಲೆಯು ತೆರೆಯಲ್ಪಟ್ಟಿತು. ಕುಂದಾಪುರ ಡಿ. ಮುನ್ಸಿಫ ಶ್ರೀ। ಬಿ. ವೆಂಕಪ್ಪ, ಬಿ. ಎ., ಬಿ. ಎಲ್., ರವರು ಅಧ್ಯಕ್ಷರಾಗಿದ್ದರು. ಶ್ರೀ। ವಿದ್ವಾನ್ ಪಿ. ಕೆ. ಆಚಾರ್ಯರು ಶಾಲೆಯ ಶ್ರೇಯಃ ಪ್ರಾರ್ಥನೆಯನ್ನು ಮಾಡುತ್ತಾ ಆರ್ಯ ಧರ್ಮದ ಆಯ ಸಂಸ್ಕೃತಿಯ ಆಚರಣ ಪ್ರಚಾರಗಳಿಗೆ ಸಂಸ್ಕೃತ ವಿದ್ಯೆಯ ಅವಶ್ಯಕತೆ ಎಷ್ಟಿರುವುದೆಂಬುದನ್ನು ಸಮರ್ಥಿಸಿ, ಸಂಸ್ಕೃತ ಪಾಠಶಾಲೆಯು, ಪ್ರಾಚೀನ ಗುರುಕುಲದಂತೆ ಉತ್ತರೋತ್ತರ ಅಭಿವೃದ್ಧಿ ಹೊಂದಲೆಂದು ಭಾಷಣ ಮಾಡಿದರು. ತರುವಾಯ ಅಧ್ಯಕ್ಷರು ಸಂಸ್ಕೃತ ಭಾಷೆಯ ಪ್ರೌಢಿಮೆಯನ್ನು ವಿವರಿಸಿದ್ದಲ್ಲದೆ, ವಿದ್ಯಾರ್ಥಿಗಳಿಗೆ ಅದರ ಜತೆಗೆ ಈಗಿನ ಜೀವನ ಹೋರಾಟದಲ್ಲಿ ಉಪಯೋಗವಾಗುವ ಇತರ ವಿಷಯಗಳನ್ನೂ ಕಲಿಸಬೇಕೆಂದೂ ವಿವರಿಸಿ ಉತ್ತಮ ಭಾಷಣ ಮಾಡಿದರು. ಧನ್ಯವಾದಾರ್ಪಣೆಯಾದ ಮೇಲೆ ಸಭೆಯು ಮುಕ್ತಾಯವಾಯಿತು.

ಈ ಶಾಲೆಯು ಶಾಶ್ವತವಾಗಿ ನಡೆದು ಬರುವಂತೆ ವಿದ್ಯಾಭಿಮಾನಿಗಳಾದ ಕೆಲವರು ೩ ಸಾವಿರ ರೂಪಾಯಿ ವರೆಗೆ ತಾವು ಸಹಾಯ ಮಾಡುವುದಾಗಿ ಭರವಸೆ ಕೊಟ್ಟಿರುತ್ತಾರೆ. ಆಡಳಿತೆಯ ವ್ಯವಸ್ಥೆಗಾಗಿ ೫ ಜನ ಸಮರ್ಥ ಸದಸ್ಯರಿಂದ ಕೂಡಿದ ಸಮಿತಿಯು ಏರ್ಪಟ್ಟಿದೆ.

ಗುರುಪುರ

ಕಳೆದ ತಾ. ೨೪ರಲ್ಲಿ ಮಂಗಳೂರು ರೇಂಜಿನ ಶಾಲೆಗಳ ಸೀನಿಯರ್ ಇನ್ಸ್‌ಪೆಕ್ಟರ್ ಶ್ರೀ। ಎಚ್. ರಾಮರಾವ್ ಎಂ. ಎ., ಎಲ್. ಟಿ., ವಿದ್ವಾನ್ ಬಿ. ಓ. ಎಲ್. ಇವರ ನೇತೃತ್ವದಲ್ಲಿ ಇಲ್ಲಿಯ ಹಿಂದೂ ಹಾಯರ್ ಎಲಿಮೆಂಟರಿ ಶಾಲೆಯ ೪ನೇ ವರ್ಷದ ವರ್ಧಂತಿಯು ಜರಗಿಸಲ್ಪಟ್ಟಿತು. ಸಂಜೆ "ಹುಸಾ" ಮರಿಗಳ ಚಟುವಟಿಕೆ ನಡೆಸಲ್ಪಟ್ಟಿತು. ಮುಖ್ಯೋಪಾಧ್ಯಾಯರಿಂದ ವರದಿವಾಚನವಾಯಿತು. ಶ್ರೀ। ಬಿ. ಕೃಷ್ಣರಾಯರು ಶಾಲಾ ಹಿತೈಷಿಗಳಾಗಿ ಮಾತನಾಡಿದರು. ಅಧ್ಯಕ್ಷರು ಆಟ ಪಾಠಗಳಲ್ಲಿ ಗೆದ್ದವರಿಗೆ ಇನಾಂ ಹಂಚಿದರು—"ನಮ್ಮ ಹಿಂದೂದೇಶದಲ್ಲಿ ಇರುವಷ್ಟು ಕಡಿಮೆ ಸಂಖ್ಯೆಯ ಅಕ್ಷರಜ್ಞರು ಇನ್ನಾವ ದೇಶದಲ್ಲೂ ಇಲ್ಲ. ನಾವು ಅಂಥಾ ವಿದ್ಯಾಸಂಸ್ಥೆಗಳಿಗೆ ಸಹಾಯ ಮಾಡಿದರೆ ಮಾತ್ರ, ನಿರಕ್ಷರತಾ ನಿವಾರಣೆಯಾಗುವುದಲ್ಲದೆ, ಊರವರು ಉದಾಸೀನರಾಗಿ ಕೂತರೆ, ಶಾಲೆಗಳು ನಿದ್ದೆ ಮಾಡುವುವು. ಸಭಿಕರೆ! ನೀವು ನಿಮ್ಮ ಮನೆಯ ಮೇಲ್ವಿಚಾರ ಹೇಗೆ ನೋಡುವಿರೋ, ಅಂತೇ ನಿಮ್ಮ ಊರಿನ ಶಾಲೆ ಎಂದು ತಿಳಿಯಿರಿ" ಎಂದು ಮೊದಲಾದ ಹಿತೋಕ್ತಿಗಳನ್ನು ಅಧ್ಯಕ್ಷರು ಸಭಿಕರಿಗಿತ್ತರು.

ರಾತ್ರೆ ಶ್ರೀ ರಾಮಕೃಷ್ಣ ಹೋಲಿನಲ್ಲಿ, ಅಧ್ಯಕ್ಷರು ಶ್ರೀಮತ್ ಸುಕೃತೇಂದ್ರ ತೀರ್ಥ ಶ್ರೀಪಾದಂಗಳವರ ತೈಲ ಚಿತ್ರ ಅನಾವರಣ ಮಾಡಿದರು. ಸಂಗೀತ ನಾಟಕ (ರಾಯರ ಮಗ) ಇತ್ಯಾದಿ ವಿವಿಧ ವಿನೋದಗಳಿದ್ದುವು.

ವಿದೇಶ

ಅಮೆರಿಕದವರಿಗೆ—
ಮಿ. ಅಮೆರಿಯವರ ಉತ್ತರ

ಮಿ। ಅಮೆರಿಯವರು ಅಮೆರಿಕ ಮತ್ತು ಕೆನಡದವರಿಗೆ ಇಂಡಿಯದ ಕುರಿತಾದ ಪ್ರಶ್ನೆಗಳ ವಿಚಾರದಲ್ಲಿ ಬ್ಯಾಡ್ ಕಾಸ್ಟ್ ಮೂಲಕವಾದ ಉತ್ತರಗಳನ್ನು ಹೇಳಿದ್ದಾರೆ. ಪ್ರಶ್ನೆಗಳು "ಇಂಡಿಯದಲ್ಲಿ ತೆರಿಗೆ, ಭಾರತದ ಡೊಮಿನಿಯನ್ ಸ್ಟಾಟಸ್, ಪಂಡಿತ ನೆಹರುಗಳ ದಂಡನೆ, ಇಂಡಿಯದ ಯುದ್ಧ ಪ್ರಯತ್ನ" ಮೊದಲಾದವುಗಳ ಕುರಿತಾಗಿದ್ದುವು. ಮಿ। ಅಮರಿಯವರು ಸರಕಾರದ ನೀತಿಯ ಪ್ರಕಾರ ತಮಗೆ ಅನುಕೂಲವಾದ ಉತ್ತರವೇಳಿ ಸಮಜಾಯಿಸಿದರು.

ಲೆನೆನ್‌ಗ್ರಾಡ್
ಸಂಗ್ರಾಮರಂಗದಲ್ಲಿ

ಏಳು ದಿನಗಳಿಂದ ಲೆನೆನ್‌ಗ್ರಾಡ್ ಸಂಗ್ರಾಮಭೂಮಿಯಲ್ಲಿ ಟ್ಯಾಂಕುಗಳ ಘೋರ ಕಾಳಗ ನಡೆಯುತ್ತಿದೆ. ಅಲ್ಲಿನ ದಾರುಣ ಸ್ಥಿತಿ ಇನ್ನೂ ತಪ್ಪಿಲ್ಲ. ಈ ಯುದ್ಧದಲ್ಲಿ ಇತ್ತಂಡೆದವರ ಸೇನೆಗಳೂ, ಸರಂಜಾಮುಗಳೂ ಹೇರಳವಾಗಿ ನಷ್ಟವಾಗಿವೆ. ರಷ್ಯದ ಗೊರಿಲ್ಲಗಳಿಂದಲೂ ಜರ್ಮನರಿಗೆ ಅಧಿಕ ಶ್ರಮವಾಗಿದೆ. ರಷ್ಯದವರು, ಬ್ರಿಟಿಷ್ ವಿಮಾನಗಳ ಸಹಕಾರದಿಂದ ಉತ್ತೇಜಿತರಾಗಿ ಘೋರ ಯುದ್ಧವನ್ನು ಮಾಡುತ್ತಿದ್ದಾರೆ. ಕ್ರಿಮಿಯದ ಪ್ರಾಂತದಲ್ಲಿ ಜರ್ಮನರ ವಿಮಾನಗಳು ಭೀಕರ ದಾಳಿಗಳನ್ನು ನಡೆಸುತ್ತ ಅದನ್ನು ಸ್ವಾಧೀನ ಮಾಡಿಕೊಳ್ಳುವ ಪ್ರಯತ್ನದಲ್ಲಿವೆ.

ಫಿನ್ನರು ಶಾಂತಿಯನ್ನು ಅಪೇಕ್ಷಿಸುತ್ತಾರೆ!

ಬ್ರಿಟಿಷರು ಫಿನ್‌ಲ್ಯಾಂಡಿಗೆ ಯುದ್ಧದಲ್ಲಿ ಭಾಗ ವಹಿಸುವ ಕುರಿತು ಎಚ್ಚರಿಕೆ ಕೊಟ್ಟ ಮೇಲೆ, ಅವರಿಲ್ಲಿ ಉಂಟಾಗಿರುವ ಶಾಂತಿ ಸ್ಫೂರ್ತಿಯನ್ನು ಕಂಡು ಜರ್ಮನರಲ್ಲಿ ಕೊಂಚ ಅಸಮಾಧಾನ ಉಂಟಾಗಿದೆಯಂತೆ. ಆದುದರಿಂದ ಅವರಲ್ಲಿ ಹಬ್ಬಿದ ಆ ವಿಸ್ತಾರವಾದ ಶಾಂತಿ ಸ್ಫೂರ್ತಿಯನ್ನು ನಿವಾರಿಸಲು ಅಶಕ್ತರಾಗಿ ಹಾಗೆ ಜರ್ಮನರು, ಫಿನ್‌ಲ್ಯಾಂಡ್‌ನವರು ಯುದ್ಧರಂಗದಿಂದ ಹಿಂದೆಗೆಯಲು ಒಪ್ಪಬಹುದೆಂದು ವಾರ್ತೆ. ಒಂದು ವೇಳೆ ಲೆನೆನ್‌ಗ್ರಾಡಿನ ಪತನದ ಬಳಿಕ ಈ ಒಪ್ಪಿಗೆ ಕೊಡಬಹುದೆಂಬ ವದಂತಿ ಹರಡಿದೆ.

ಕಾಮನ್ಸ್ ಮಂದಿರದಲ್ಲಿ

ಯುದ್ಧದ ಪರಿಸ್ಥಿತಿಯ ಕುರಿತು, ಬ್ರಿಟಿಷ್ ಪ್ರಧಾನ ಮಿ। ಚರ್ಚಿಲ್ಲರು, ಬೇಗನೇ ಜರುಗುವ ಮುಂದಿನ ಕಾಮನ್ಸ್ ಮಂದಿರದ ಅಧಿವೇಶನದಲ್ಲಿ ಒಂದು ಭಾಷಣಮಾಡಿ, ಅದರಲ್ಲಿ ರಷ್ಯಾ ರಣರಂಗಗಳ ವಿಚಾರವನ್ನು, ಅಮೆರಿಕವೂ ಬ್ರಿಟನೂ ರಷ್ಯಕ್ಕೆ ಮಾಡಿರುವ ಸಹಾಯ, ಮುಂದೆ ಮಾಡಲಿರುವ ಸಹಾಯಗಳ ಕುರಿತೂ ಮಾತಾಡುವರು.

ಇಂಡಿಯಕ್ಕೆ ಮಿ। ಡಫ್‌ಕೂಪರರು

ಲೆಂಕೆಸ್ಟರ್ ಡಚ್ಚಿಯ ಚಾನ್ಸಲರರಾದ ಮಿ। ಡಫ್‌ಕೂಪರರು ಇಂಡಿಯಕ್ಕೆ ಬಂದು ವೈಸರಾಯರೊಡನೆ ಮಾತುಕಥೆ ಬೆಳಸುವರು. ಚರ್ಚಾವಿಷಯವೇನೆಂದು ಪ್ರಕಟವಾಗಿಲ್ಲ.

ಮಾಜಿ ಷಹಾ

ಇರಾನಿನ ಮಾಜಿ ಷಹಾರವರು, ತಮ್ಮ ಸಂಸಾರಸಹಿತ, ತೆಹರಾನಿನಿಂದ ಹಡಗಿನಲ್ಲಿ ದಕ್ಷಿಣ ಅಮೆರಿಕಕ್ಕೆ ಹೊರಟಿರುವರು.

ಆಫ್ರಿಕದ ಯುದ್ಧ

ಅಬಿಸೀನಿಯದಲ್ಲಿರುವ ಇಟೆಲಿ ಸೇನೆಗಳು ಗುಂಡು ಹಾರಿಸುವುದನ್ನು ನಿಲ್ಲಿಸಬೇಕಾಗಿ ಇಟೆಲಿ ಸರಕಾರ ಅಪ್ಪಣೆ ಮಾಡಿದೆ. ಇಲ್ಲಿ ಈಗ ಇಟೆಲಿ ಸೇನೆಗಳಿಗೆ ಅನ್ನಸಾಮಗ್ರಿಗಳು ಅಭಾವವಾದುದೂ ಒಂದು ಕಾರಣ.

ಮಿಸೆಸ್ ಡೆಂಜಿಲ್ ಕ್ಲಾರ್ಕೆ

ಪಿಪಿಂಗಿನಲ್ಲಿ ಬ್ರಿಟಿಷ್ ರಾಯಭಾರಿ ಕಾರ್ಯಾಲಯದ ಪ್ರೆಸ್ ಶಾಖೆಗೆ ಸೇರಿದ ಮಿ। ಡೆಂಜಿಲ್ ಕ್ಲಾರ್ಕೆಯವರ ಪತ್ನಿಯನ್ನು ಜಪಾನೀ ಅತಿಗಾಮಿಗಳು ಹಾರಿಸಿ ಕೊಂಡುಹೋಗಿದ್ದರು. ಈಗ ಜಪಾನೀ ಜನ್ಮದ ಆ ಮಹಿಳೆಯನ್ನು ಆಕೆಯ ಪತಿಗೊಪ್ಪಿಸಲಾಗಿದೆ.

ಇಟೆಲಿಯಲ್ಲಿ ಆರ್ಥಿಕ ವಿಪತ್ತು

ಇಟೆಲಿಯ ಮುಂದಿ ಯುದ್ಧದಿಂದ ಬೇಸತ್ತಿದ್ದಾರೆ. ಅಲ್ಲಿ ಆರ್ಥಿಕ ಅಡಚಣೆಯೂ ಆಹಾರ ಸಾಮಗ್ರಿಗಳ ಅಭಾವವೂ ಹೆಚ್ಚಿದೆ. ಪದಾರ್ಥಗಳ ಬೆಲೆ ವಿಪರೀತವಾಗಿ ಏರಿದೆ. ಬಟ್ಟೆಗಳ, ಪಾದರಕ್ಷೆಗಳ, ರೋಮದ ಟೋಪಿಗಳ ವ್ಯಾಪಾರವಲ್ಲಿ ನಿಂತಿದೆ. ಮುಂದೇನೆಂದು ತಿಳಿಯದು.

ಜಪಾನರು ಚೂಹಾವನ್ನು ಹಿಡಿದರೇ?

ಜಪಾನರು ಹುನಾನ್ ಪ್ರಾಂತದ ನಗರವಾದ ಚೂಹಾವನ್ನು ಹಿಡಿದರಿಂದು ಹೇಳಲಾಗಿದೆ. ಅದೊಂದು ಪ್ರಾಮುಖ್ಯವಾದ ರೈಲ್ವೆ ಕೇಂದ್ರ.

ಮಾಸ್ಕೊವಿನಲ್ಲಿ ಮೂರು ರಾಷ್ಟ್ರಗಳ ಮಾಟಂಗು

ರಷ್ಯದ ವಿದೇಶೀ ಮಂತ್ರಿಯಾದ ಎಂ. ಮಾಲ್ಟೊವಿನ ಅಧ್ಯಕ್ಷತೆಯಲ್ಲಿ ಮಾಸ್ಕೊವಿನಲ್ಲಿ ಮೂರು ರಾಷ್ಟ್ರಗಳ ಮಾತುಕಥೆಯಾರಂಭವಾಗಿದೆ. ಈ ವಿಮಾಟಂಗ್ ಸೇನೆ, ನೌಕಾ, ವಿಮಾನ ಬಲ ಇತ್ಯಾದಿಗಳ ಸಂಬಂಧ ಆರು ಕಮಿಟಿಗಳನ್ನು ರಚಿಸಿದ್ದು ಅವು ಈ ವಾರದಲ್ಲೇ ತಮ್ಮ ವರದಿಯೊಪ್ಪಿಸುವವು.

ಇರಾನಿನಲ್ಲಿ ಜನರಲ್ ವೇವಿಲ್ಲರು

ಜನರಲ್ ವೇವಿಲ್ಲರು ತೆಹರಾನಿನಲ್ಲಿ ಇಳಿದು ಅಲ್ಲಿ ಆ ದೇಶದ ಮತ್ತು ಎಣ್ಣೆಯ ಬಾವಿಗಳ ರಕ್ಷಣೆಗಾಗಿ ಬ್ರಿಟಿಷರೂ, ರಷ್ಯದವರೂ ಜತೆಗೂಡಿ ಯಾವ ಕಾರ್ಯಕ್ರಮಗಳನ್ನು ಕೈಕೊಳ್ಳಬಹುದೆಂಬ ಕುರಿತು ರಷ್ಯದ ಅಧಿಕಾರಿಗಳೊಡನೆ ಚರ್ಚಿಸಿದರು. ಹಾಗೂ ಕಾಕಸಸ್ಸಿನ ರಕ್ಷಣೋಪಾಯಗಳು ಯಾವುವೆಂದೂ ಜಿಜ್ಞಾಸೆ ನಡೆಸಿ, ರಷ್ಯ-ಬ್ರಿಟನ್ ಸೇನೆಗಳ ಸಹಕಾರವು ಅಗತ್ಯವೆಂದು ತೀರ್ಮಾನಿಸಿರುವರು.

ಸಿರಿಯಕ್ಕೆ ಸ್ವಾತಂತ್ರ್ಯ

ಸಿರಿಯಕ್ಕೆ ಸ್ವಾತಂತ್ರ್ಯವನ್ನು ಕೊಡಲಾಗಿದೆ ಎಂದು ಜನರಲ್ ಕಾಟ್ರೋಕ್ಸ್‌ರವರು ಪ್ರಕಟಿಸಿದ್ದಾರೆ. ಅಲ್ಲಿ ಅವರು ತಮ್ಮ ಸ್ವತಂತ್ರ ಸೇನೆಗಳನ್ನು ಇಟ್ಟುಕೊಳ್ಳಬಹುದಾದರೂ, ಮಿತ್ರರ ಹಿತಕ್ಕಾಗಿ ಸದ್ಯ ಅಲ್ಲಿನ ರಸ್ತೆಗಳ, ವಿಮಾನ ನಿಲ್ದಾಣಗಳ, ಬಂದರಗಳ ಕಾರ್ಯಭಾರಗಳನ್ನೆಲ್ಲ ಮಿತ್ರರೇ ನಿರ್ವಹಿಸುವರು.

ಬಲ್ಗೇರಿಯದ ಮೇಲೆ ನಾಜಿಗಳ ಒತ್ತಾಯ

ನಾಜಿಗಳು ಬಲ್ಗೇರಿಯದವರ ಮೇಲೆ ಯುದ್ಧಕ್ಕೆ ಸೇರಬೇಕೆನ್ನುವ ಒತ್ತಾಯವನ್ನು ವಿಪರೀತವಾಗಿ ಹೇರುತ್ತಿದ್ದಾರೆ. ಈಗ ಬ್ರಿಟನ್ ಮತ್ತು ಪೂರ್ವದ ಯುಗೋಸ್ಲಾವಿಯದ ಸರ್ವಿಸಿನಲ್ಲಿದ್ದು, ಅಲ್ಲೆಲ್ಲ ಕ್ರಾಂತಿಯನ್ನು ಉಂಟುಮಾಡಲು ಯತ್ನಿಸಿದರೆಂಬ ಇಚ್ಛೆ ಮುಂದಿ "ಗೌಪ್ತಚಾರ"ರ ವಿಚಾರಣೆಯನ್ನು, ನಾಜಿಗಳ ಪ್ರೇರಣೆಯಿಂದ, ಸೋಫಿಯದಲ್ಲಿ ಈಚೆಗೆ ಆರಂಭಿಸಲಾಗಿದೆ.

ಕ್ವೆಟ್ಟಾ ಭೂಕಂಪ

ಇಲ್ಲಿ ೧೫ ಭೂಕಂಪದ ಸ್ಪರ್ಶಗಳು ಉಂಟಾಗಿ ಒಬ್ಬ ಮುದುಕಿ ಸತ್ತಳು, ಮತ್ತಿಬ್ಬರಿಗೆ ಗಾಯವಾಯಿತು, ಇಲ್ಲಿನ ಹೊಸ ಮುನಿಸಿಪಲ್ ಟೌನ್‌ಹಾಲಿನ ಕಂಪೌಂಡಿನ ಗೋಡೆ ಜರಿದು ಬಿತ್ತು, ನಷ್ಟ ಸಾವಿರಾರು ರೂಪಾಯಿಗಳಷ್ಟು ಎಂದು ಹೇಳಲಾಗಿದೆ.

ಎರ್ನಾಳು

ಇಲ್ಲಿಯ ಬೋರ್ಡು ಹಾಯರ್ ಎಲಿಮೆಂಟರಿ ಶಾಲಾ ಮಕ್ಕಳ ಹೆತ್ತವರ ಕೂಟ ಮತ್ತು ಶಾರದಾ ಪೂಜೆಯು ಕಳೆದ ತಾ. ೨೭ರಲ್ಲಿ ಶ್ರೀ। ಕೆ. ವಾಸುದೇವರಾಯರ ಅಧ್ಯಕ್ಷತೆಯಲ್ಲಿ ಬಹು ವೈಭವದಿಂದ ನೆರವೇರಿತು. ಶಾಲೆಯ ಅಭಿವೃದ್ಧಿಯನ್ನು ಮುಖ್ಯೋಪಾಧ್ಯಾಯ ಶ್ರೀ। ಯಂ. ಯಂ. ಪ್ರಭುಗಳಿಂದ ಸಭಿಕರು ತಿಳಿದು ಸಂತೋಷಪಟ್ಟು ಈ ಶಾಲೆಗೆ ಸಂಪೂರ್ಣ ಸಹಾಯವನ್ನು ಮಾಡುವೆವೆಂದು ಭರವಸೆ ಇತ್ತರು. ಶ್ರೀ। ಸಾಂತು ಸೆಟ್ಟರವರು, ಶಾಲಾ ಮೈದಾನಿನಲ್ಲಿ, ಸೀಮೆಂಟಿನ ಸೀಟೊಂದನ್ನು ಕಟ್ಟಿಸಿ, ಶಾಲಾ ತೋಟದಲ್ಲಿಡಲು ಎಂಟು ತೆಂಗಿನ ಸಸಿಗಳನ್ನು ದಾನವೀಯುವೆನೆಂದರು. ಶ್ರೀ। ಎಸ್. ಕೆ. ಗೋವಿಂದರಾವ್‌ರವರೂ ಒಂದು ಸೀಮೆಂಟಿನ ಸೀಟನ್ನು ಕಟ್ಟಿಸಿ ಕೊಡುವುದಲ್ಲದೆ ನಾಲ್ಕು ತೆಂಗಿನ ಸಸಿಗಳನ್ನು ದಾನ ಕೊಡುತ್ತೇನೆಂದರು. ಶ್ರೀ। ಅಂತಯ್ಯ ಹೆಗ್ಡೆಯವರು ಶಾಲಾ ಗೇಟನ್ನು ಧರ್ಮಾರ್ಥವಾದ ಕಟ್ಟಿಸಿ ಕೊಡುವೆನೆಂದು ವಾಗ್ದಾನಮಾಡಿದರು.

ಅಧ್ಯಕ್ಷ ಮಹಾಶಯರು, ಈ ಸಭೆಯ ಉದ್ದೇಶಗಳನ್ನು ತಿಳಿಸಿ, ಹೆತ್ತವರ ಕರ್ತವ್ಯಗಳನ್ನು ವಿವರಿಸಿ, ಈ ಶಾಲಾಭಿವೃದ್ಧಿಯನ್ನು ಶ್ಲಾಘಿಸಿ, ಇಲ್ಲಿಯ ವಿದ್ಯಾರ್ಥಿಗಳು ಮುಂದೆ ಭಾರತ ಮಾತೆಯ ವೀರ ಸತ್ಪುತ್ರರಾಗಿ ದೇಶ ಹಿತೈಶಿಗಳಾಗಲೆಂದು ಹಾರೈಸಿ ಸುರಸವಾಗಿ ಭಾಷಣವಿತ್ತರು. ಶ್ರೀ। ವೈ. ಲಕ್ಷ್ಮೀನಾರಾಯಣರಾವ್‌ರವರು ಧನ್ಯವಾದಗಳನ್ನರ್ಪಿಸಿದರು.

ಅಸೂಯೆ ಹುಟ್ಟಿಸುವ ಕಲೆಗಳಿಂದ ನಿಮ್ಮ ಚರ್ಮವನ್ನು ಸ್ವಚ್ಛಪಡಿಸಿಕೊಳ್ಳಿರಿ

ಕ್ರಮವಾಗಿ ಪ್ರತಿರಾತ್ರೆ ಸಾಂಬಕ್ ಸವರಿ

ಅಸೂಯೆ ಹುಟ್ಟಿಸುವ ಕಲೆ, ಹುಣ್ಣು, ಕಜ್ಜಿಗಳು ತೊಂದರೆ ಕೊಡದಂತೆ ನೋಡಿಕೊಳ್ಳಿ. ತಾಗಿದ ಜಾಗಕ್ಕೆ ಪ್ರತಿ ರಾತ್ರೆಯೂ ಸಾಂಬಕ್ ತಿಕ್ಕಿ, ಚರ್ಮವನ್ನು ನಿರೋಗಗೊಳಿಸಿ ಹಸನುಮಾಡಿರಿ. ಸಾಂಬಕ್‌ನಲ್ಲಿರುವ ಅಮೂಲ್ಯ ವನಸ್ಪತಿತೈಲವು, ಸೂಕ್ಷ್ಮ, ಅಂಗಗಳೊಳಗೆ ಹೊಕ್ಕು, ಬೇನೆ ಶಮನಗೊಳಿಸಿ ಬಾವು ತಗ್ಗಿಸಿ, ಶೀಘ್ರ ಗುಣಪಡಿಸುತ್ತದೆ. ಸಾಂಬಕ್ ವಿಷಾಣುಗಳನ್ನು ನೀಗಿಸಿ, ಚರ್ಮಕ್ಕೆ ಬಲಗೊಟ್ಟು ಕಲೆಯುಳಿಯದಂತೆ ಗುಣಪಡಿಸುತ್ತದೆ.

ಬೆಲೆ ರೂಪ್ಯಾ ಒಂದು ಯಾ ರೂ. 2-4-0. ಸಾಂಬಕ್ ಸಾಬೂನ್ ರೂ. ಒಂದು, ಸಾಂಬಕ್ ಪೌಡರ್ ರೂ. ಒಂದು. ಏಜೆಂಟರು:—ಮೆಸರ್ಸ್ ದಾಧಾ & ಕೊ., ಪಾರ್ಕ್ ಟೌನ್, ಮದ್ರಾಸು.

ಯಾವಾಗಲೂ ಸಾಂಬಕ್ ಉಪಯೋಗಿಸಿ

ZAM-BUK

ಪ್ರಾಣಿಗಳ ಕೊಬ್ಬಿನಿಂದ ವಿರಹಿತವಾದುದು

ಗ್ರೇಂಡ್

ಆಕ್ಷನ್ ಸೇಲ್

ಮಹಾಜನರ ಅಪೇಕ್ಷೆ ಮೇರೆಗೆ

ಇನ್ನೂ ಕೆಲವು ದಿವಸಗಳ ವರೆಗೆ ಅನೇಕ ತರದ ಜವುಳಿಗಳು ಬೆಲೆ ಅತೀ ಕಡಿಮೆಗೆ

ವಿಕ್ರಿತ ಮತ್ತು ಏಲಂ ಕೂಡಾ

ಏಲಂ ಪ್ರತಿ ಆದಿತ್ಯವಾರ ಸಂಜೆ ಗಂಟೆ 5-30ಕ್ಕೆ ಸ್ವಾರಂಭ

ಎ. ವರದರಾಜು ಚೆಟ್ಟಿಯಾರ್,

ಜವುಳಿ ಅಂಗಡಿ,

ಮಾರ್ಕೆಟ್ ರಸ್ತೆ, ಮಂಗಳೂರು.

To serve you — — Is our Ambition.

Resources of over A Crore and over Forty Lacs of Surplus Funds—these are the means by which we can serve you. The men in our thirty-eight offices, from the senior-most Director to the junior-most employee, are all eager to serve you. Come in to-day and tell us how we can serve you. Or, if you so prefer, we will call upon you at your request.

CANARA BANK, LIMITED.
ESTD: 1906.

ಕಂಠೀರವ
KANTEERAVA
KANARESE, BI-WEEKLY

XXIII] ಮಂಗಳೂರು, ತಾರೀಕು ೩—೧೦—೧೯೪೧ [೫೩
೧೮೬೩ ವೃಷ ಸಂವತ್ಸರದ ಆಶ್ವೀಜ ಶು ೧೩ ಶುಕ್ರವಾರ

ಕೌಕಸಸ್ಸಿನ ಕಡೆಗೆ ಜರ್ಮನರ ಭರಾಟಿಯೇ?

ಬಹು ಕಾಲದಿಂದ ತಕ್ಕಡಿಯಲ್ಲಿ ತೂಗುತ್ತಿರುವ ಲೆನೆನ್‌ಗ್ರಾಡಿನ ಅದೃಷ್ಟ ಮುಂದೆ ಹೇಗೆ ತಿರುಗಬಹುದೆಂದು ಹೇಳಲು ಬಾರದಾಗಿರುವಾಗ, ದಕ್ಷಿಣದಲ್ಲಿಯೂ ನಾಜಿಗಳ ಒತ್ತಾಟ ಹೆಚ್ಚಿದುದು ಕಂಡುಬರುತ್ತಿದೆ. ಉಕ್ರೈನಿನ ಯುದ್ಧವನ್ನು ಸಂಪೂರ್ಣಗೊಳಿಸಲು ನಾಜಿಗಳು ಮೂರು ಕಡೆಗಳಿಂದ ಆಕ್ರಮಿಸಿದ್ದಾರೆ. ಜರ್ಮನರು ಕೀವ್ ಪ್ರಾಂತದಲ್ಲಿ ರಷ್ಯದ ಹೇರಳ ಸೇನೆಗಳನ್ನು ನಾಶಮಾಡಿದೆವೆನ್ನುತ್ತಾರೆ. ಆದರೆ ಆ ಪ್ರಯತ್ನದಲ್ಲಿ ಅವರೆಷ್ಟು ಮಟ್ಟಿಗೆ ಕೃತಾರ್ಥರಾಗಿರುವರೆಂದು ಇನ್ನೂ ಸ್ಪಷ್ಟವಿಲ್ಲ.

ಆದರೂ, ರಷ್ಯದವರು ಈ ಕಾದಾಟದಲ್ಲಿ ತಮ್ಮ ಹೆಚ್ಚಿನ ಸೇನೆಗಳನ್ನು ಉಳಿಸಿಕೊಂಡಿದ್ದರೆ ಅವರಿನ್ನೂ ಜರ್ಮನರನ್ನು ಪ್ರತಿಭಟಿಸಬಲ್ಲರೆಂಬುದು ನಿರ್ವಿವಾದದ ಮಾತು. ಇದಕ್ಕೆ ಜರ್ಮನರ ಉತ್ತರವೆಂದರೆ, ಅವರ ಸೇನೆಗಳನ್ನು ಸುತ್ತುಕಟ್ಟುವುದು. ಆದರೆ, ರಷ್ಯದವರು ಇದುವರೆಗೆ ಹಾಗೆ ಸುತ್ತುಕಟ್ಟಲು ಸಿಕ್ಕಿಲ್ಲ; ತಪ್ಪಿಸಿಕೊಂಡಿದ್ದಾರೆ. ಆದುದರಿಂದ ನಿರ್ಧಾರವಾದ ವಿಜಯವನ್ನು ಸಂಪಾದಿಸಬೇಕೆನ್ನುವ ಹಿಟ್ಲರನ ಅಭಿಪ್ರಾಯಕ್ಕೆ ಇದರಿಂದ ತೊಡಕುಂಟಾಗಿದೆ.

ಕ್ರಿಮಿಯವನ್ನೂ ಆಕ್ರಮಿಸಿ ಕಪ್ಪು ಸಮುದ್ರದಲ್ಲಿನ ರಷ್ಯದ ನೌಕಾಬಲಕ್ಕೆ ಒಂದು ಬಲವಾದ ಪೆಟ್ಟನ್ನು ಕೊಡಬೇಕೆಂಬುದೂ ಹಿಟ್ಲರಿನ ಇನ್ನೊಂದು ಆಶಯ. ಇದೂ ಸದ್ಯ ಸಾಧ್ಯವಾಗಿಲ್ಲವೇಕೆಂದರೆ, ಅಲ್ಲಿನ ರಷ್ಯದ ಬಲವು ತೀವ್ರವಾಗಿ ಕಾದಾಡಿದೆ. ಇನ್ನು ಒಡೆಸ್ಸಾ! ಅಲ್ಲಿಯೂ ಘೋರವಾದ ಕಾಳಗವೇ. ಇದೂ, ಇದರೊಂದಿಗೆ ಕೌಕಸಸ್ಸೂ ಬಿಳೇ ರಷ್ಯದ ಜೀವಾಳವಾಗಿದ್ದು, ಜರ್ಮನರ ಹಿಡಿತದ ಮುಖ್ಯ ಗುರಿಯಾಗಿವೆ. ಇಲ್ಲಿ ರಷ್ಯಕ್ಕೆ ಬೇಕಾದ ಧಾರಾಳ ಪ್ರಮಾಣದ ಜಾನುವಾರು, ಧಾನ್ಯ ಸಂಗ್ರಹ, ಬಟಾಟೆ ಇವು ಇವೆ. ಆದುದರಿಂದಲೇ ಲೆನೆನ್‌ಗ್ರಾಡ್ ಕದನಕ್ಕೆ ಇಷ್ಟು ಪ್ರಾಶಸ್ತ್ಯ ಬಂದಿದೆ!

ಉಕ್ರೈನ್ ಸಕ್ಕರೆ, ಧಾನ್ಯ, ಗೋದಿ, ಕಲ್ಲಿದ್ದಲು, ಕಬ್ಬಿಣ, ಮ್ಯಾಂಗನೀಸ್ ಮೊದಲಾದುವುಗಳಿಂದ ಸಮೃದ್ಧವಾದ ನಾಡು. ಅಲ್ಲದೆ, ಉರಾಳ ಪ್ರಾಂತದಲ್ಲಿ, ಯುದ್ಧದ ನಿರೀಕ್ಷಣೆಯಿಂದ ಹಲವು ಹೊಸ ದೊಡ್ಡ ಕಾರ್ಖಾನೆಗಳನ್ನೂ ಸ್ಥಾಪಿಸಲಾಗಿದೆ. ಹೀಗಿರುವಲ್ಲಿ ಕೀವ್, ಕಾಖೋರ್ವ್, ನಿಪ್ರೊ ಪಿಟ್ರೊವಸ್ಕ್‌ಗಳು ರಷ್ಯದ ಕೈತಪ್ಪಿದುದರಿಂದ, ರಷ್ಯಕ್ಕೆ, ಉಕ್ರೈನ್, ಉರಾಲುಗಳಿಗೆ ಬಹು ದೊಡ್ಡ ಪೆಟ್ಟಾಗಿದೆ.

ಕೌಕಸಸ್ಸಿನ ಮೇಲಿನ ಜರ್ಮನರ ದಂಡಯಾತ್ರೆಯೂ ಗಮನಾರ್ಹವಾದುದೇ. ಅಲ್ಲಿ ಎಣ್ಣೆಯೊಂದೇ ಅಲ್ಲ; ತಾಮ್ರವೂ ಹೇರಳವಾಗಿದೆ. ಇದು, ರಷ್ಯದ ಕೈತಪ್ಪಿದರೆ, ರಷ್ಯಕ್ಕೆ ಬಹಳ ಬಾಧಕವಿದೆ. ಜರ್ಮನರು ಇಲ್ಲಿ ಪ್ರವೇಶಿಸಿದರೆ, ಅವರಿಗೆ ಅಲ್ಲಿ ಧಾರಾಳ ಸೌದೆಯೂ, ಉಗ್ರಾಣಗಳೂ ದೊರಕಿ, ಮಿತ್ರರ ಮೇಲಿನ ಯುದ್ಧಕ್ಕೆ ಬಹಳ ಅನುಕೂಲವಾಗುವುದು. ಈ ಸಂದರ್ಭದಲ್ಲಿ, ಬ್ರಿಟಿಷರು ಅದನ್ನು ಆಕ್ರಮಿಸುವಂತೆ ಸೇನಾಪತಿ ಜನರಲ್ ವೇವಿಲ್ಲರು ಯೋಜನೆ ಹೂಡಿರುವುದು ವಿಹಿತವಾಗಿದೆ. ಈಗ ಜರ್ಮನರು ಮೊದಲು ಆ ಎಣ್ಣೆ ಭೂಮಿಯನ್ನು ಮುಟ್ಟುವರೋ ಬ್ರಿಟಿಷರೋ ಎಂದು ನೋಡಬೇಕಾಗಿದೆ. ಬ್ರಿಟಿಷರು ಮುಟ್ಟಿದರೆ ರಷ್ಯಕ್ಕೊಂದು ಸಹಾಯ; ಹಿಟ್ಲರಿನ ಪ್ಲಾನ್ ತಲೆಕೆಳಗೆ. ಅದನ್ನೇ ಮಿತ್ರರ ಆ ಕೀರ್ತಿಯನ್ನೇ ನಾವೂ ಹಾರೈಸುತ್ತಿರುವೆ!

ಒರಿಯಂಟಲ್ ಗವರ್ನ್‌ಮೆಂಟ್ ಸೆಕ್ಯೂರಿಟಿ ಲ್ಯಾಫ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್

ಮೇಲ್ಕಂಡ ವಿಮಾ ಕಂಪೆನಿಯವರು ನಮಗೆ ಕಳುಹಿಕೊಟ್ಟ ೧೯೪೦ನೇ ಇಸ್ವಿಯ (ಕಂಪೆನಿಯ) ವರ್ಷಾವಧಿ ವರದಿ, ಲೆಕ್ಕಪತ್ರ ಇತ್ಯಾದಿಗಳನ್ನು ಆದರದಿಂದ ಸ್ವೀಕರಿಸಿದ್ದೇವೆ.

ವರದಿಯ ವರ್ಷದಲ್ಲಿ ಸುಮಾರು ೭೪ ಲಕ್ಷ ರೂಪಾಯಿಗಳ ಮೊತ್ತದ ೫೫,೬೬೪ ಪಾಲಿಸಿಗಳನ್ನು ಕಂಪೆನಿ ಹೊಸದಾಗಿ ಕೊಟ್ಟಿದೆ; ಅದೇ ವರ್ಷ ಕಂಪೆನಿಗೆ ಪ್ರೀಮಿಯಮ್ಮಿನ ಒಟ್ಟು ಉತ್ಪತ್ತಿ ಸುಮಾರು ೩೭೩ ಲಕ್ಷ ರೂಪಾಯಿ; ಬಡ್ಡಿಯ ಉತ್ಪತ್ತಿ ಸುಮಾರು ೫೦ ಲಕ್ಷ; ಕ್ಲೈಮುಗಳ ಪಾವತಿ, ಮರಣ ಸಂಖ್ಯೆ ಇವು ತೃಪ್ತಿಕರವಾಗಿದೆ; ಆಡಳಿತದ ಖರ್ಚಿನ ದಾಮಾಶಯವೂ ಬಹಳ ತಗ್ಗಿದೆ; ಕಂಪೆನಿಯ ನಿಧಿಯು ಈಗ ಸುಮಾರು ೨೭೫ ಕೋಟಿ ರೂಪಾಯಿಗಳಿಗೂ ಮಿಕ್ಕಿದೆ; ಈಗ ಪ್ರಚಾರದಲ್ಲಿರುವ ಎಶ್ಯೂರೆನ್ಸುಗಳ ಜುಮ್ಲಾ ಮೊತ್ತವು ಸುಮಾರು ರೂ. ೬೫,೦೧,೯೪,೦೭೭ ಅಲ್ಲದೆ ಪಾಲೊಂದಕ್ಕೆ ೧೯೪೦ನೇ ಇಸ್ವಿಯ ಲಾಭಾಂಶವಾಗಿ, ಡಿವಿಡೆಂಡ್ ರೂ. ೧೨೫ರಂತೆ ಹಂಚಲೂ ನಿರ್ಧಾರವಾಗಿದೆಯಾಗಿ ತಿಳಿದುಬಂದಿದೆ.

ನಮ್ಮ ದೇಶದ ವಿಮಾ ಸಂಸ್ಥೆಗಳಲ್ಲಿ ಉನ್ನತ ಸ್ಥಾನವನ್ನೇರಿದ, ತನ್ನ ಕೀರ್ತಿಯನ್ನೂ, ಪ್ರಾಪ್ತಿಯನ್ನೂ ಎಲ್ಲ ಕಡೆಗಳಲ್ಲಿಯೂ ತಗಲೇ ಹಬ್ಬಿಸಿದ ಒಂದು ಸಂಸ್ಥೆ ಎಂದರೆ "ಒರಿಯಂಟಲೇ" ಎಂದು ನಾವು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಹಾಗೂ ಸುಮಾರು ೬೬ ವರ್ಷಗಳಿಂದ ನಮ್ಮಲ್ಲಿ ಬಾಳಿ ಬದುಕಿ ಬಂದ ಈ ಸಂಸ್ಥೆ, ಕಾಲಕಾಲಕ್ಕೂ ಅತಿಶಯವಾದ ಜನಾದರವನ್ನೂ, ವಿಶ್ವಾಸವನ್ನೂ ಸಂಪಾದಿಸುತ್ತ ಬಂದಿದೆ ಎನ್ನುವುದೂ ಹೆಚ್ಚಿನ ಮಾತೇ. ಮುಖ್ಯವಾಗಿ ಇದರ ಭದ್ರವಾದ ವಿನಿಯೋಗ, ವಿಚಕ್ಷಣತೆಯ ಆಡಳಿತ, ಸುರಕ್ಷಿತವಾದ ವ್ಯವಹಾರ ಕೌಶಲ ಇತ್ಯಾದಿಗಳಿಗೆಲ್ಲ ಈ ಕಂಪೆನಿಯ ಗಣನೀಯವಾದ, ಮೇಲೆ ವಿವರಿಸಿದ ಅಂಕೆಸಂಖ್ಯೆಗಳೇ ನಿದರ್ಶನಗಳಾಗಿವೆ ಎಂದು ಸೂಚಿಸಿ. ಈ ಸಂಸ್ಥೆಗೆ ಇನ್ನೂ ಉತ್ತರೋತ್ತರವಾಗಲೆಂದು ಹಾರೈಸುತ್ತೇವೆ.

ಹಳ್ಳಿ ಪೋಸ್ಟ್‌ಮ್ಯಾನನ ಮೃತ್ಯು

ಒಬ್ಬ ಹಳ್ಳಿ ಪೋಸ್ಟ್‌ಮ್ಯಾನ್ ಗುರುನಾಥನ್ ಎಂಬಾತನ ಶವ ಒಂದು ಬಾವಿಯಲ್ಲಿ ದೊರಕಿದೆ. ಇವನು ವಿಲ್ಲುಪುರಂ ಪೋಸ್ಟಾಫೀಸಿನ ಜವಾನ; ಇವನ ಮೇಲೆ ಹಣದ ದುರುಪಯೋಗದ ಹಲವು ಆರೋಪಗಳಿದ್ದುವು.

ಇಂಡಿಯಾದ

ಇಂಡಿಯಾಕರಾವಳಿ ಇಂಡಿಯಾದ ಗಡಿಯಾಗಿದ್ದ ಕಾಲ ಕಳೆದುಹೋಯಿತು. ರೇಡಿಯೋ, ವಿಮಾನ, ವೇಗವಾದ ಹಡಗುಗಳು, ಪ್ಯಾರಾಷೂಟ್ ಸೇನೆಗಳು, ಪಂಚಮಾಂಗದ ಚಟುವಟಿಕೆಗಳು, ಇವೆಲ್ಲವೂ ದೂರದ ಅಂತರವನ್ನು ತುಂಬಾ ತಗ್ಗಿಸಿವೆ. ಇದರ ಪರಿಣಾಮವಾಗಿ ನಮಗೆ ಆಪತ್ತು ಹೆಚ್ಚಾಗಿದೆ. ಅಟ್ಲಾಂಟಿಕ್ ಸಾಗರವು ಅಮೆರಿಕದ ರಕ್ಷಣೆಯ ಪ್ರಥಮ ರಂಗವಾಗಿರುವಂತೆ–ಈ ರಂಗವನ್ನು ಅಮೆರಿಕದ ಮಿತ್ರರಾಷ್ಟ್ರವಾದ ಬ್ರಿಟನ್ ರಕ್ಷಿಸುತ್ತಿದೆ–ಈಜಿಪ್ಟ್, ಪಾಲಸ್ತೈನ್, ಸಿರಿಯಾ, ಇರಾಕ್, ಪೂರ್ವ ಆಫ್ರಿಕಾ, ಮಲಯಾ ಇವು ಇಂಡಿಯಾದ ರಕ್ಷಣೆಯ ಹೊರವಲಯಗಳಾಗಿವೆ.

ಈ ಕಾರಣಕ್ಕಾಗಿಯೇ ಇಂಡಿಯಾದ ದೇಶದ ಸೇನೆಯ ಅತ್ಯುತ್ತಮ ಯೋಧರು ಗ್ರೇಟ್ ಬ್ರಿಟನ್, ಆಸ್ಟ್ರೇಲಿಯಾ, ನ್ಯೂಜಿಲೆಂಡ್, ಮತ್ತು ಇತರ ರಾಷ್ಟ್ರಗಳ ವೀರರೊಡಗೂಡಿ, ಇಂಡಿಯಾದ ಆ ಹೊರವಲಯದ ರಕ್ಷಣ ಕ್ಷೇತ್ರಗಳಲ್ಲಿ ತಮ್ಮೆಲ್ಲರ ಸಮಾನ ಶತ್ರುವನ್ನು ಹೊಡದೋಡಿಸಲು ಸಿದ್ಧರಾಗಿ ನಿಂತಿದ್ದಾರೆ. ಇದನ್ನು ನೀವು ಗಮನಿಸಿದರೂ, ಗಮನಿಸದಿದ್ದರೂ ಈ ಜನರು ನಮ್ಮ ನಾಡಿನ ಹೊಸ ಗಡಿಗಳ ರಕ್ಷಣೆಯಲ್ಲಿ ತೊಡಗಿರುವುದರಿಂದ ನಾವು ನಿರಾತಂಕವಾಗಿ ನಮ್ಮ ಕೆಲಸ ಕಾರ್ಯಗಳನ್ನು ನಡೆಸಿಕೊಂಡು ಶಾಂತವಾಗಿ ಬಾಳುವುದು ಸಾಧ್ಯವಾಗಿದೆ ಎಂಬುದು ಮಾತ್ರ ನಿಜ.

ಅವನ್ನು ರಕ್ಷಿಸಲು ನೆರವಾಗಿರಿ. ಕೊಳ್ಳಿರಿ ಡಿಫೆನ್ಸ್ ಸೇವಿಂಗ್ಸ್ ಸರ್ಟಿಫಿಕೇಟ್‌ಗಳನ್ನು.

GI-54-Kn.

ಹಿಂದೂದೇಶ

ಪೋಲೀಸ್ ಪಂಗಡದ ಫಜೀತಿ

ಧನ್‌ಬಾದ್ ಪ್ರಾಂತದ ಬಗ್‌ಮರ ಪೋಲೀಸ್‌ರೊಡನ್ಕೆ ಆ ಸ್ಟೇಶನಿನ ಪೊ. ಸ. ಇನಸ್ಪೆಕ್ಟರ್‌ರು, ಕಳ್ಳತನದಿಂದ ಸರಾಯಿ ಸಾಗಿಸುತ್ತಿದ್ದರೆಂಬ ಕೆಲವರನ್ನು ಹಿಡಿಯಬೇಕೆಂದು ಬಾಕ್ರಿಹಳ್ಳಿಗೆ ಸಾಗಿ ಅಲ್ಲಿ ಬಿ. ಎನ್. ರೈಲ್ವೆ ಸಂಕದ ಬಳಿ ಗುಪ್ತವಾಗಿ ಹೊಂಚು ಹಾಕಿ ಕೊಂಡಿದ್ದರು. ಆಗ, ಆ ಸರಾಯಿ ಕಳ್ಳರು ಅತ್ತ ಬರಲು, ಅವರನ್ನು ಹಿಡಿಯಬೇಕೆಂದು ಈ ಪೋಲೀಸರು ಕಾಣಿಸಿಕೊಳ್ಳುವಷ್ಟರಲ್ಲಿ, ಆ ಸೇತುವೆಯ ಕಾವಲುಗಾರರು, ಈ ಪೋಲೀಸರನ್ನು ತಡೆದು ನಿಲ್ಲಿಸಿ, ಮುಂದುವರಿದರೆ ಗುಂಡು ಹಾಕಿಯೇವೆಂದು ಬೆದರಿಸಿ, ನಿರ್ಬಂಧಿಸುವ ಈ ಗಲಭೆಯಲ್ಲಿ ಆ ಕಳ್ಳರು ಸುಖವಾಗಿ ಜಾರಿದರು. ಈಗ ಆ ಕಾವಲುಗಾರರ ಮೇಲೆ ಮೊಕದ್ದಮೆಯಾಗಿದೆ.

ಮಹಾತ್ಮರ ಭೇಟಿ

ಈ ತಿಂಗಳಲ್ಲಿ ಕಾಂಗ್ರೆಸ್ ಮುಖಂಡರು ಕೆಲವರು ಗಾಂಧಿಜಿಯವರ ಭೇಟಿ ಮಾಡಿ ಅವರೊಡನೆ ಸದ್ಯದ ರಾಜಕೀಯ ವಿಚಾರಗಳ ಕುರಿತು ಚರ್ಚಿಸುವರೆಂದು ತಿಳಿಬಂದಿದೆ. ಪ್ರಾಯಶಃ ಈ ತಿಂಗಳಲ್ಲಿ ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಅಧಿವೇಶನವಿರಲಾರದು.

ಕ್ವೆಟ್ಟದಲ್ಲಿ ಭೂಕಂಪ

ಈಚಿಗೆ ಕ್ವೆಟ್ಟದಲ್ಲಿ ೩೫ ಸೆಕುಂಡುಗಳ ಕಾಲ ತೀವ್ರ ವೇಗತೆಯ ಭೂಕಂಪವಾಯಿತು. ಎರಡು ಮೂರು ಸಲ ಭೂಮಿ ನಡುಗಿತು. ಇದರಿಂದ ಅಲ್ಲಿನ ಟೆಲಿಗ್ರಾಫ್, ಟೆಲಿಫೋನ್‌ಗಳಿಗೆ ತಡೆಯಾಯಿತು. ಅಂಗಡಿಗಳಲ್ಲಿದ್ದ ಗಾಜಿನ ಸಾಮಗ್ರಿಗಳು, ಬಾಟಲಿಗಳು, ಮಣ್ಣಿನ ಸಾಮಾನುಗಳು ಕೆಳಗೆ ಬಿದ್ದು ಪುಡಿಯಾಗಿ ಹೆಚ್ಚಿನ ನಷ್ಟವಾಗಿದೆ. ಕೆಲವು ಕಟ್ಟಡಗಳಲ್ಲಿ ಬಿರುಕುಬಂದಿದೆ. ಪ್ರಾಣ ನಷ್ಟದ ವಾರ್ತೆ ಕೊಂಚ. ಜನಗಳು ಭೀತರಾಗಿದ್ದಾರೆ.

ಆತ್ಮಹತ್ಯೆ

ಕೊಯಮತ್ತೂರಿನ ಕೃಷಿ ಪರಿಶೋಧನಾ ಸಂಸ್ಥೆಯ ಏಲೆಟ್ ವಿಭಾಗದ ಅಸಿಸ್ಟೆಂಟರಾದ ಶ್ರೀ। ಸಿ. ಕೆ. ಗೋವಿಂದನ್ ಸಂಬಿಯಾರ್ ಎಂಬವರು ಅದೇ ಕೃಷಿ ಕಾಲೇಜಿಗೆ ಸೇರಿದ ಒಂದು ತೋಟದ ಮರಕ್ಕೆ ಉರುಳು ಹಾಕಿಕೊಂಡು ಸತ್ತರು. ಕಾರಣ ತಿಳಿದಿಲ್ಲ. ಪೋಲೀಸ್ ತನಿಖೆ ನಡೆಯುತ್ತಿದೆ.

ನ್ಯಾಶನಲ್ ಡಿಫೆನ್ಸ್ ಕೌನ್ಸಿಲು

ಪಂಜಾಬಿನ ಹೊಸ ಗವರ್ನರರಾದ ಸರ್ ಬಿ. ಗ್ಲಾನ್ಸಿಯವರ ಗೌರವಾರ್ಥವಾಗಿ ಅಲ್ಲಿನ ಮಂತ್ರಿಮಂಡಲವೇರ್ಪಡಿಸಿದ ಒಂದು ಔತಣ ಸಮಾರಂಭ ಕಾಲದಲ್ಲಿ ಪಂಜಾಬಿನ ಪ್ರಧಾನರಾದ ಸರ್। ಸಿಕಂದರ್ ಹಯಾತ್ ಖಾನರು ಕೊಟ್ಟ ಒಂದು ಭಾಷಣದಿಂದ, ಒಂದು ವೇಳೆ, ಸರ್ ಸಿಕಂದರರು ತಿರುಗಿ "ನ್ಯಾಶನಲ್ ಡಿಫೆನ್ಸ್ ಕೌನ್ಸಿಲಿನ ಮೆಂಬರರಾಗಿ" ಸೇರಬಹುದೇ, ಎಂದು ಹಲವರು ಊಹಿಸುವಂತಾಗಿದೆ.

ಅನ್ನಾಮಲೈ ವಿಶ್ವವಿದ್ಯಾನಿಲಯ

ಅನ್ನಾಮಲೈ ನಗರದಲ್ಲಿ ಆ ವಿಶ್ವವಿದ್ಯಾನಿಲಯದ ಸ್ಥಾಪಕರ ದಿನಾಚರಣೆಯ ಹನ್ನೆರಡನೆ ವಾರ್ಷಿಕಾಧಿವೇಶನವು, ಸ್ಥಾಪಕರಾದ ರಾಜಾ ಸರ್. ಅನ್ನಾಮಲೈ ಚೆಟ್ಟಿಯಾರ್ (ಚೆಟ್ಟಿನಾಡ್) ಅವರ "ಷಷ್ಟಿಪೂರ್ತಿ" ಮಹೋತ್ಸವದೊಡನೆ ಸಂಭ್ರಮದಿಂದ ಜರುಗಿತು. ಈ ಸಂಬಂಧದ ಒಂದು ಸಾರ್ವಜನಿಕ ಸಭೆಯಲ್ಲಿ ರ್ಯಾ। ಬ। ಎಂ. ಆರ್. ಜಯಕರರು ಅಧ್ಯಕ್ಷತೆ ವಹಿಸಿದ್ದರು. ಈ ಸಂದರ್ಭದಲ್ಲಿ ಸರ್. ಚೆಟ್ಟಿಯಾರರು ಈ ವಿಶ್ವವಿದ್ಯಾನಿಲಯದ ಸೌಕರ್ಯಕ್ಕಾಗಿ ೫೬ ಸಾವಿರ ರೂಪಾಯಿಗಳನ್ನೂ, ತಮಿಳು ಸಂಗೀತಕ್ಕಾಗಿ ೧೫ ಸಾವಿರ ರೂಪಾಯಿಗಳನ್ನೂ ದಾನವಾಗಿ ಕೊಟ್ಟಿರುವರೆಂದು ಪ್ರಕಟವಾಗಿದೆ.

ಪೋಲೀಸರ ಗೋಳಿಬಾರು ನೆಲ್ಲೂರಲ್ಲಿ

ನೆಲ್ಲೂರಲ್ಲಿ ಹುಲಿವೇಷಗಳ ಮೆರವಣಿಗೆಗಳ ಕಾಲದಲ್ಲಿ ಗಲಭೆಯಾಗಿ, ಪೋಲೀಸರ ಮೇಲೆ ಜನಗಳು ಕಲ್ಲು ಬಿಸಾಡಿದುದರಿಂದ ಪೋಲೀಸರು ಗುಂಡು ಹಾರಿಸಿದುದರ ಪರಿಣಾಮವಾಗಿ ಒಬ್ಬ ೧೬ ವರ್ಷದ ನರಸಮ್ಮ ಎಂಬ ಹುಡುಗಿ ಮೃತಳಾದಳು; ಒಬ್ಬ ಹರಿಜನ ಬಾಲಕನಿಗೂ, ಒಬ್ಬ ಮುದುಕನಿಗೂ ಗಾಯಗಳಾಗಿವೆ. ಹಿಂದೂಗಳು ಹುಲಿವೇಷ ಹಾಕಬಾರದೆಂಬ ನಿರ್ಬಂಧಾಜ್ಞೆಯನ್ನು ಮೀರಿದ ಪರಿಣಾಮವೇ ಈ ಗಲಭೆಗೆ ಕಾರಣವೆಂಬಂತಿದೆ.

ಹಿಂದೂ ಮಹಾಸಭೆಗೆ ತಡೆ

ಬಿಹಾರ ಪ್ರಾಂತದ ಭಾಗಲ್ಪುರದಲ್ಲಿ ಅಖಿಲ ಭಾರತ ಹಿಂದೂ ಮಹಾಸಭೆಯ ೨೩ನೇ ಅಧಿವೇಶನಕ್ಕಾಗಿ, ೫೦ ಸಾವಿರ ಮಂದಿ ಪ್ರೇಕ್ಷಕರು ಕುಳಿತುಕೊಳ್ಳುವ

ಕೊನೆಯುಚ್ಛ್ವಾಸ

ಮಿ। ಚರ್ಚಿಲ್ಲರು ಕಾಮನ್ಸ್ ಮಂದಿರದಲ್ಲಿ ರಷ್ಯಕ್ಕೆ ಬ್ರಿಟಿಷರ ಸಹಾಯವೇ ಮೊದಲಾದುವುಗಳ ಕುರಿತು ಭಾಷಣ ಮಾಡುತ್ತ, ಬ್ರಿಟನಿಗೆ ಎಚ್ಚರಿಕೆ ಹೇಳಿದರು; ಚಳಿಗಾಲದಲ್ಲಿ ರಷ್ಯದಲ್ಲಿ ಜರ್ಮನರ ಕಾದಾಟದ ಭರ ಕಡಿಮೆಯಾದೀತೆಂದು ನಂಬಬೇಡಿ ಎಂದರು—ಜರ್ಮನರು ಕೀವಿನ ಪೂರ್ವಕ್ಕಿರುವ ಪೊಲ್ಟಾವಾವನ್ನು ಹಿಡಿದರು—ಜಪಾನರು ಹ್ಯುನಾನ್ ಪ್ರಾಂತದ ರಾಜಧಾನಿ ಚಂಗ್ಸಾವನ್ನು ಹಿಡಿದಿಲ್ಲವೆಂದು ಚೀನೀಯರ ಹೇಳಿಕೆ—

ಸಭಾ ಮಂಟಪದ ಏರ್ಪಾಡಾಗಿದ್ದು, ಈಗ ಆ ಅಧಿವೇಶನವು ಅಲ್ಲಿ ನಡೆಯಕೂಡದೆಂದು ಅಲ್ಲಿನ ಕಮಿಶನರು ಆಪ್ಪಣೆ ಮಾಡಿದ್ದಾರೆ!

೭೨ನೇ ಗಾಂಧಿಜಯಂತಿ ಗಾಂಧಿಜಿಯವರ ಅಮೃತವಾಣಿ

"ಗಾಂಧಿ ಜಯಂತಿಯಲ್ಲ; ಇದು ಖಾದಿ ಜಯಂತಿ ಎಂದು ಎಲ್ಲರೂ ಆಚರಿಸಲಿ!"

"ಚರಕ ಸೂರ್ಯನಂತೆ; ಸೂರ್ಯನ ಸುತ್ತ ಇತರ ಗೃಹಗಳು ಸುತ್ತುವಂತೆ, ರಚಕದ ಸುತ್ತ ರಾಷ್ಟ್ರೀಯ ಗುಣಗಳು ಸುತ್ತುತ್ತಿವೆ."

"ಖಾದಿಯೇ ಸ್ವರಾಜ್ಯ ಸಂಸಾದನೆಯ ಹಾದಿ."

"ಹಿಂದೂ ಧರ್ಮಕ್ಕೆ ಕಲಂಕವಾದ ಅಸ್ಪೃಶ್ಯತೆ ಅಳಿಯದಿದ್ದರೆ, ಹಿಂದೂ ಧರ್ಮ ಉಳಿಯದು."

"ಸಂಸ್ಕೃತ ಸಾಹಿತ್ಯವನ್ನು ಕಲಿಯಿರಿ"

ಅನ್ನಾಮಲೈ ವಿಶ್ವವಿದ್ಯಾನಿಲಯದ ಸ್ಥಾಪಕರ ದಿನಾಚರಣೆಯಂದು ಅಧ್ಯಕ್ಷತೆ ವಹಿಸಿದ್ದ ರ್ಯಾ। ಬ। ಎಂ. ಆರ್. ಜಯಕರರು, ಸಂಸ್ಕೃತ ಭಾಷೆಯ ಮಹತ್ವಗಳನ್ನು ವಿವರಿಸಿ, ಭಾರತದ ಸಾಂಸ್ಕೃತಿಕ ಏಕೀಕರಣಕ್ಕೆ "ಸಂಗೀತ"ವೇ ಮುಖ್ಯವಾದ ಒಂದು ಸಾಧನವೆಂದರು.

ವಿದ್ಯಾರ್ಥಿಗಳು ಪತ್ರಿಕಾ ಉದ್ಯೋಗಿಗಳ ಮೇಲೆ ಕೈ ಮಾಡಿದರು.

ಸರ್ ಪರಶುರಾಂ ಭಾವೂ ಕಾಲೇಜ್, ಪೂನಾ, ಇಲ್ಲಿ ಆ ಕಾಲೇಜ್ ಪತ್ರಿಕೆಯ ರಜತ ಮಹೋತ್ಸವವನ್ನು ನೆರವೇರಿಸುವ ಸಮಾರಂಭ ಕಾಲಧಲ್ಲಿ "ನವಯುಗ"ದ ಪತ್ರ ಸಂಪಾದಕರೂ ಪ್ರಸಿದ್ಧ ಗ್ರಂಥಕರ್ತರೂ ಆಗಿರುವ ಶ್ರೀ। ಪಿ. ಕೆ. ಆತ್ರೆ ಅವರನ್ನು ಭಾಷಣ ಕೊಡಲಿಕ್ಕೆಂದು ಆಮಂತ್ರಿಸಿ, ಅವರು ಅಂದಿನ ಮುಖ್ಯ ಅತಿಥಿಗಳಾಗಿ ಬಂದಿದ್ದರು. ಆದರೆ ಅವರು ಭಾಷಣ ಕೊಡಲು ಆರಂಭಿಸಿದಾಗ, ವಿದ್ಯಾರ್ಥಿಗಳು ಕೆಲವರು ಗಲಭೆ ಎಬ್ಬಿಸಿದುದೂ ಸಾಲದೆ, ಶ್ರೀ। ಆತ್ರೆಯವರಿದ್ದಲ್ಲಿಗೂ ನುಗ್ಗಿ ಅವರ ಮೇಲೆ ಕೈಮಾಡಿದರು. ಕಾಲೇಜ್ ಪ್ರಿನ್ಸಿಪಾಲರ ಆಗಮನದ ಬಳಿಕ ಅಲ್ಲಿ ಶಾಂತಿ ನೆಲಸಿತು. ಈಚಿಗೆ ಶ್ರೀ। ಆತ್ರೆಯವರು ತಮ್ಮ ಪತ್ರಿಕೆಯಲ್ಲಿ ಶ್ರೀ। ವಿ. ಡಿ. ಸವರ್‌ಕಾರರನ್ನು ಟೀಕಿಸಿ ಲೇಖ ಬರೆದುದೇ ಇಂದಿನ ಈ ಗಲಭೆಗೆ ಕಾರಣವೆಂದು ಊಹಿಸಲಾಗಿದೆ.



ಮಿತ್ರಮಂಡಲಿ—ಮಂಗಳೂರು

ನವರಾತ್ರಿಯ ಮಹೋತ್ಸವ

ಸ್ಥಳೀಯ ಮಿತ್ರಮಂಡಲಿಯವರು ಕಳೆದ ತಾ. ೨೭-೨೮ರಲ್ಲಿ, ಕೆನರಾ ಹೈಸ್ಕೂಲ್ ಸುಬ್ರಾವ್ ಸ್ಮಾರಕ ಸದನ ನಲ್ಲಿ "ದಸರಾ ಸಾಹಿತ್ಯೋತ್ಸವ"ವನ್ನೂ, ಭುವನೇಂದ್ರ ಸಭಾಸದನದಲ್ಲಿ "ವಿವಿಧ ವಿನೋದಾವಳಿ"ಗಳನ್ನೂ ಯಶಸ್ವಿಯಾಗಿ ನಡೆಸಿದರು.

ತಾ. ೨೭ರಂದು ಸಂಜೆ ಶ್ರೀ। ಕೆ. ವೆಂಕಟರಾಮಪ್ಪ, ಎಂ. ಎ. (ಮೈಸೂರು) ಅವರು, "ಜಿನ್ನನ ಯ ಶೋ ಧ ರ" ದ ಕುರಿತು ಹೃದಯಂಗಮವಾಗಿ ಭಾಷಣ ನಾಡಿದರು. ಅಧ್ಯಕ್ಷಸ್ಥಾನವನ್ನು ಶ್ರೀ। ನುಳಿಯ ತಿಮ್ಮಪ್ಪಯ್ಯ ಅವರು ವಹಿಸಿ ದ್ದರು.

ತಾ. ೨೮ರಂದು, ಸಂಜೆ ಸ್ಥಳೀಯ ಗೌ। ಕಾಲೇಜಿನ ಕನ್ನಡ ಪಂಡಿತರಾದ ಶ್ರೀ। ಸಂಜುಂಡ ಸ್ವಾಮಿ ಅವರ ಅಧ್ಯ ಕ್ಷತೆಯಲ್ಲಿ, ಬೆಂಗಳೂರಿನ ಉಭಯ ಭಾಷಾ ಪಂಡಿತರಾದ ಶ್ರೀ। ದೇವುಡು ನರಸಿಂಹ ಶಾಸ್ತ್ರಿ ಎಂ. ಎ., ಅವರು, ನೆರೆ ನಿದ್ದ ಕನ್ನಡಾಭಿಮಾನಿಗಳಾದ ಸ್ತ್ರೀವು ಮಹರ ಮುಂದೆ, "ಕರ್ನಾಟಕ ಸಂಸ್ಕೃತಿ"ಯ ವಿಷಯವಾಗಿ ಬೋಧಪ್ರದವೂ, ವಿಚಾರ ಪರಿಪುಷ್ಟವೂ ಹಾಸ್ಯರಸಗರ್ಭಿತವೂ ಆದ ಉದ್ದಾಮ ಭಾಷಣವನ್ನು ಸುಮಾರು ೨ ಗಂಟೆಗಳ ಹೊತ್ತು ಮಾಡಿ ದರು. ಅಧ್ಯಕ್ಷರ ಕೋರಿಕೆಯಂತೆ ಶ್ರೀ। ಶಾಸ್ತ್ರಿಗಳ ವ್ಯಕ್ತಿಪರಿಚಯವನ್ನು ಶ್ರೀ। ಕೆ. ವೆಂಕಟರಾಮಪ್ಪ ಎಂ. ಎ., ಅವರು ಮಾಡಿಸಿಕೊಟ್ಟ ಬಳಿಕ ಶ್ರೀ। ಶಾಸ್ತ್ರಿಗಳು 'ಸಂಸ್ಕೃತಿ' ಅಂದರೇನು ಎಂಬುದನ್ನು ಹಲವು ಸಾಮಾನ್ಯ ಉದಾಹರಣೆಗಳಿಂದ ಸಭಿಕರಿಗೆ ಮನದಟ್ಟು ಮಾಡಿಕೊಟ್ಟರು. ನಮ್ಮ ಸಂಸ್ಕೃತಿಗೆ ಆಧಾರವಾದ ಗಾದೆ, ಹಾಡು ಲಾವಣಿ ಇತ್ಯಾದಿಗಳ ಕುರಿತು ಮಾತಾಡುತ್ತ, ಆಯ್ದ ಹಲವು ಹಾಡು ಲಾವಣಿಗಳನ್ನೋದಿ ಅದರಿಂದ ನಾವು ತಿಳಿದುಕೊಳ್ಳಬೇಕಾದ ವಿಷಯಗಳೇ ನೆಂಬುದನ್ನು ಎತ್ತಿ ತೋರಿಸಿದರು. ಕನ್ನಡ ನುಡಿನಾಡುಗಳು ಬಂದಾಗುವಂತೆ ಪ್ರಾರ್ಥಿಸಿದರು. ಅಧ್ಯಕ್ಷರು ಶಾಸ್ತ್ರಿ ಗಳನ್ನು ವಂದಿಸಿದರು.

ತಾ. ೨೯ರಂದು ಉತ್ತರ ಕರ್ನಾಟಕದ ಶ್ರೀ। ಮಾಂಜರೇಕರ್, ಬಿ. ಏ. ಇವರು ಅಧ್ಯಕ್ಷತೆ ವಹಿಸಿ "ಕರ್ನಾಟಕದ ನಾನಾ ವಿಚಾರ"ಗಳ ಕುರಿತು ಭಾಷಣಮಾಡಿದ ಮೇಲೆ, ಶ್ರೀ।ಗಳಾದ ಶೀನಪ್ಪ ಹೆಗ್ಗಡೆ, ರಂಗರಾವ್ ತಲ್ಪೇರಿ ಕರ್, ಸೆಡ್ಯಾಪು ಕೃಷ್ಣಭಟ್ಟ ಮೊದಲಾದವರು ಸಾಹಿತ್ಯ ಸಂಬಂಧವಾದ ಹಲವು ಅಂಗಗಳ ಕುರಿತು ಭಾಷಣಮಾಡಿದರು.

ಈ ಮೂರು ದಿನಗಳಲ್ಲಿಯೂ "ಪ್ರಕಾಶ ಎಸೋಸಿಯೇಶನ್" "ಕರ್ನಾಟಕ ಥಿಯೇಟರ್ಸ್" "ಲಲಿತ ಕಲಾಮಂಡಲಿ"ಯವರ ನಾಟಕ, ನೃತ್ಯ, ಸಂಗೀತ ಇತ್ಯಾದಿ ವಿನೋದಗಳಿದ್ದುವು.

ದ. ಕನ್ನಡ ಜಿಲ್ಲಾ ಬೋರ್ಡಿನ ನಿರ್ಣಯ

ನಮ್ಮ ಜಿಲ್ಲಾ ಬೋರ್ಡ್ ಮೀಟಿಂಗ್ ಕಳೆದ ತಾ. ೬ರಲ್ಲಿ ಅದರ ಕಾರ್ಯಾಲಯದಲ್ಲಿ ಡಾ। ಕೆ. ವಿಠ್ಠಲ ಪೈಟ್ಟರ ಅಧ್ಯಕ್ಷತೆಯಲ್ಲಿ ಸೇರಿ, ವಿದ್ಯಾಂಗದ ಬಜೆಟ್ಟನ್ನು ಹೊಂದಿಸಿಕೊಳ್ಳಲು ಲೇಂಡ್ ಟ್ಯಾಕ್ಸನ್ನು ರೂಪಾಯಿಗೆ ೧೦ ಪೈಗಳಂತೆ ವಸೂಲು ಮಾಡುವ ಅಥವಾ ೧೪೩ ಮಂದಿ ಉಪಾಧ್ಯಾಯರನ್ನು ತೆಗೆದುಹಾಕಿ ಆ ತೆರಿಗೆಯನ್ನು ರೂಪಾಯಿಗೆ ೭॥ ಪೈಗೆ ಏರಿಸುವ ಸರಕಾರದ ಸೂಚನೆಯನ್ನು ಪರ್ಯಾಲೋಚಿಸಲಾಯಿತು. ಅದರಲ್ಲಿ ಬೋರ್ಡು ಅನಿವಾರ್ಯ ಪಕ್ಷದಿಂದ ೧೩೮ ಮಂದಿ ಉಪಾಧ್ಯಾಯರನ್ನು ತೆಗೆದುಹಾಕಲೊಪ್ಪಿದರೂ, ಮೊದಲೇ ಭಾರವಾದ ತೆರಿಗೆಯನ್ನು ತೆರುತ್ತಿರುವ ಈ ಜಿಲ್ಲೆಯಲ್ಲಿ ಇನ್ನೂ ವಿದ್ಯಾತೆರಿಗೆಯನ್ನು ಹೆಚ್ಚಿಸುವುದಲ್ಲವೆಂದೂ, ಪ್ರಾಂತದ ಆಡಳಿತದಲ್ಲಿ ಜನರಿಗೆ ಮಾತಾಡುವ ಹಕ್ಕೇ ಇಲ್ಲದ ಈ ಸಂದರ್ಭದಲ್ಲಿ ಸರಕಾರವು ತಾನೇ ಆ ತೆರಿಗೆಯನ್ನು ಹೆಚ್ಚಿಸಬಹುದೆಂದೂ ತೀರ್ಮಾನಮಾಡಿತು. ಅಲ್ಲದೆ ಪಂಚಾಯಿತು ಬೋರ್ಡುಗಳ ಉಪಕಾರಕ್ಕಾಗಿ ಪುನಃ ಮೂರು ಪೈಗಳ ತೆರಿಗೆಯನ್ನು ಹೆಚ್ಚಿಸುವ ವಿಚಾರದಲ್ಲಿ ತನ್ನ ಬೇಸರವನ್ನೂ ವ್ಯಕ್ತಪಡಿಸಿತು. ಶೀರೂರು ಬೋರ್ಡ್ ಹೈಸ್ಕೂ। ವಿ। ಶಾಲೆಯ ಮೇಲ್ತರಗತಿಗಳನ್ನು ರದ್ದುಮಾಡಿ ಅಲ್ಲಿನ ಮೂರು ಮಂದಿ ಉಪಾಧ್ಯಾಯರ ಸಂಖ್ಯೆ ಕಡಿಮೆ ಮಾಡುವುದು ವಿಕ ಅನುಚಿತವೆಂದು ಸ್ಪಷ್ಟಗೊಳಿಸಿ, ಮೂಲ್ಕಿ ಬೋರ್ಡ್ ಹೈಸ್ಕೂಲಲ್ಲಿ ವಿಜ್ಞಾನದ ತರಗತಿಗಳನ್ನು, ಬೋರ್ಡಿಗೇನೂ ವೆಚ್ಚ ತಗಲದಿದ್ದರೆ, ತೆರೆಯುವ ಅಧಿಕಾರವನ್ನು ಅಧ್ಯಕ್ಷರಿಗೆ ಕೊಡಲಾಯಿತು.

ಮಂಗಳೂರಲ್ಲಿ "ಗಾಂಧಿ ಜಯಂತಿ" ಕಾರ್ಯಕ್ರಮ

೩-೧೦ರಲ್ಲು ಪೂ. ಗ. ೮ ಖಾದಿ ಮೂರಾಟ (ತಾ. ೮ರ ವರೆಗೂ ನಿತ್ಯವೂ ಬೆಳಿಗ್ಗೆ ಖಾದಿ ಮಾರಾಟವಿದೆ.) ಅ. ಗ. ೨ ನೂಲುವ ಸ್ಪರ್ಧೆ. ಅ. ಗ. ೬-೩೦ ಸಾರ್ವಜನಿಕ ಸಭೆ (ಬತ್ತೇರಿಯ ಬಳಿ); ೪-೧೦ರಲ್ಲು ಅ. ಗ. ೨ ಹಿಂದೀ ಭಾಷಣ ಸ್ಪರ್ಧೆ (ಗಣಪತಿ ಹೈಸ್ಕೂಲಿನಲ್ಲಿ), ಅ. ಗ ೬ ಸಾರ್ವಜನಿಕ ಸಭೆ (ಕಂಕನಾಡಿಯಲ್ಲಿ); ೫-೧೦ರಲ್ಲು ಅ. ಗ. ೨ ಕನ್ನಡ ಭಾಷಣ ಸ್ಪರ್ಧೆ (ಗಣಪತಿ ಹೈಸ್ಕೂಲಿನಲ್ಲಿ); ಅ. ಗ. ೬-೩೦ ಸಾರ್ವಜನಿಕ ಸಭೆ (ಮೈದಾನಿನಲ್ಲಿ); ೬-೧೦ರಲ್ಲು ಅ. ಗ. ೨ ಸೂತ್ರಯಜ್ಞ; ಅ. ಗ. ೬-೩೦ ಸಾರ್ವಜನಿಕ ಸಭೆ (ಹೊಗೆ ಬಜಾರಿನಲ್ಲಿ); ೭-೧೦ರಲ್ಲು ಅ. ಗ. ೨ ಸೂತ್ರಯಜ್ಞ; ಅ. ಗ. ೭-೩೦ ಸಾರ್ವಜನಿಕ ಸಭೆ (ಉರ್ವ ಮೈದಾನಿನಲ್ಲಿ); ೮-೧೦ರಲ್ಲು ಅ. ಗ. ೨ ಗ್ರಾಮ ಕೈಗಾರಿಕೆ ಪ್ರದರ್ಶನ; ಅ. ಗ. ೬-೩೦ ಸಾರ್ವಜನಿಕ ಸಭೆ (ಮೈದಾನಿನಲ್ಲಿ); ವಿ. ಸೂ. ಕನ್ನಡ ಹಿಂದೀ ಭಾಷಣ ಸ್ಪರ್ಧೆಗಳಲ್ಲಿ ಜಿಲ್ಲೆಯ ಯಾವತ್ತೂ ಮಹನೀಯರಿಗೂ ಮಹಿಳೆಯರಿಗೂ ಪ್ರವೇಶವಿದೆ. ಇದಕ್ಕೆ ಪ್ರತ್ಯೇಕವಾಗಿ ಎರಡೆರಡು ಅಮೂಲ್ಯ ಬಹುಮಾನಗಳಿವೆ. ಗ್ರಾಮ ಕೈಗಾರಿಕೆಯ ಪ್ರದರ್ಶನಕ್ಕೆ ಜಿಲ್ಲೆಯ ಯಾವತ್ತೂ ಗ್ರಾಮಗುಡಿ ಕೈಗಾರಿಕೆಗಳವರು ತಮ್ಮ ಕೈಗಾರಿಕೆಗಳನ್ನು ಕಳುಹಿಸಿದರೆ ಪ್ರದರ್ಶಿಸಿ ಉತ್ತಮವಾದವುಗಳಿಗೆ ಬಹುಮಾನ ಪ್ರಶಸ್ತಿ ಪತ್ರಗಳು ಕೊಡಲಾಗುವುದು ಎಂದು ಶ್ರೀ। ಬಿ. ದಾಮೋದರ ಬಾಳಿಗ, ಜಿ. ಕಾಂ. ಕಮಿಟಿ ಅಧ್ಯಕ್ಷ, ಇವರು ತಿಳಿಸುತ್ತಾರೆ.

ಮಂಗಳೂರು ತಾಲೂಕು ಬೋರ್ಡು ಎಲಿಮೆಂಟರಿ ಶಾಲಾ ಉಪಾಧ್ಯಾಯ—ಉಪಾಧ್ಯಾಯಿನಿಯರ ಯೂನಿಯನ್

ಈ ಯೂನಿಯನಿನ ವರ್ಷಾವಧಿ ಮಹಾಸಭೆಯು ಇದೇ ಬರುವ ತಾ. ೧೯ನೇ ರವಿವಾರ ಅಪರಾಹ್ನ ೫ ಗಂಟೆ ೨ಕ್ಕೆ ಮಂಗಳೂರು ಗಣಪತಿ ಹೈಸ್ಕೂಲಿನಲ್ಲಿ ಜರಗುವುದು. ಉಪಾಧ್ಯಾಯ—ಉಪಾಧ್ಯಾಯಿನಿಯರ ಸಂಕಷ್ಟಗಳು, ಚುನಾವಣೆ ಇತ್ಯಾದಿಗಳ ಕುರಿತು ಚರ್ಚಿಸಲಿಕ್ಕಿರುವುದರಿಂದ ಈ ತಾಲೂಕಿಗೆ ಸಂಬಂಧಪಟ್ಟ ಎಲ್ಲಾ ಬೋರ್ಡು ಎಲಿಮೆಂಟರಿ ಶಾಲಾಧ್ಯಾಪಕ—ಅಧ್ಯಾಪಕಿಯರೂ ಅಗತ್ಯ ಉಪಸ್ಥಿತರಾಗಬೇಕಾಗಿ ಅಪೇಕ್ಷಿಸೋಣಾಗುತ್ತದೆ ಎಂದು ಯೂನಿಯನಿನ ಅಧಿಕಾರಿಗಳ ವಿನಂತಿ.

ನಾಡ ಹಬ್ಬ

ಕುಂದಾಪುರ ಕರ್ನಾಟಕ ಸಾಹಿತ್ಯ ಸಂಘದಲ್ಲಿ, ಈ ವರ್ಷ ಹೊಸದಾಗಿ ೫ ದಿವಸ (ದಸರ) ನಾಡ ಹಬ್ಬವನ್ನು ಆಚರಿಸಬೇಕೆಂದು ನಿಶ್ಚಯವಾದಂತೆ, ಪ್ರಥಮ ದಿವಸದ ಕಾರ್ಯಕ್ರಮವು ತಾ. ೨೬ರಲ್ಲು ಯಶಸ್ವಿಯಾಗಿ ಜರಗಿತು. ಪ್ರಾರ್ಥನೆಯಾಗಿ ಸಮಿತಿಯ ಕಾರ್ಯದರ್ಶಿಗಳಾದ ಶ್ರೀ। ವಿದ್ವಾನ್ ಕೆ. ಜಿ. ಶರ್ಮರು ಪ್ರಾಸ್ತಾವಿಕ ಭಾಷಣ ಮಾಡಿದರು. ಅಧ್ಯಕ್ಷರಾದ ಶ್ರೀ। ವಕೀಲ್ ಕೆ. ನರಸಿಂಹ ಕಾಮತರು ಸದಸ್ಯರಿಗೆಲ್ಲಾ ಸ್ವಾಗತವನ್ನು ಹಾರೈಸಿ ಭಾಷಣ ಮಾಡಿದರು. ವಿದ್ವಾನ್ ಪಿ. ಕೆ. ಆಚಾರ್ಯರು, "ಕರ್ನಾಟಕದಲ್ಲಿ ನಾಡ ಹಬ್ಬದ ಆಚರಣೆ" ಎಂಬ ವಿಷಯದಲ್ಲಿ ಭಾಷಣ ಮಾಡುತ್ತಾ ನಾಡ ಹಬ್ಬವು ಕರ್ನಾಟಕದಲ್ಲಿ ವಿಜಯನಗರದ ಕಾಲದ ಲಾಗಾಯಿತು ಹೇಗೆ ವಿಶಿಷ್ಟ ರೀತಿಯಿಂದ ಆಚರಿಸಲ್ಪಡುತ್ತದೆಯೆಂದೂ, ನಾಡಹಬ್ಬವು ಕರ್ನಾಟಕದಲ್ಲಿ ಹಿಂದೂಗಳ ಹಬ್ಬವಾಗಿರದೆ, ಎಲ್ಲಾ ಜಾತಿಯವರಿಗೂ ಅನ್ವಯಿಸುವ ನಾಡ ಹಬ್ಬವಾಗಿ ಹೇಗೆ ಪರಿಣಮಿಸಿತು ಎಂದೂ ಈ ಹಬ್ಬವನ್ನು ಗ್ರಾಮ ಗ್ರಾಮಗಳಲ್ಲಿಯೂ, ಹಾಗೆಯೇ ಎಲ್ಲಾ ನಗರಗಳಲ್ಲಿಯೂ ಆಚರಿಸುವ ಅವಶ್ಯಕತೆಯನ್ನು ವಿವರಿಸಿ ಭಾಷಣ ಮಾಡಿದರು. ತದನಂತರ ಇಲ್ಲಿಯ ವಕೀಲರಾದ ಶ್ರೀ। ನೇರಂಬಳ್ಳಿ ಪರಮೇಶ್ವರಯ್ಯನವರು, "ಕರ್ನಾಟಕದ ಗತ ವೈಭವ" ವೆಂಬ ವಿಷಯದಲ್ಲಿ ಅನೇಕ ಪ್ರಾಚೀನ ವಿಷಯಗಳನ್ನುದಾಹರಿಸುತ್ತ, ಕನ್ನಡಿಗರ ಉಜ್ವಲವಾದ ವಂಶ ಪರಂಪರೆಯನ್ನೂ, ಶಿಲಾಶಾಸನ, ವಾಸ್ತುಶಿಲ್ಪ ಮುಂತಾದ ಐತಿಹಾಸಿಕ ವಿಷಯಗಳನ್ನೂ ಹೃದಯಂಗಮವಾಗಿ ವಿವರಿಸಿದರು. ಶ್ರೀ। ಉಡ್ಪಿ ವೆಂಕಟ ಕೃಷ್ಣಾಚಾರ್ಯರು ಫಿಡ್ಲು, ಸಂಜೀವ ನಾಯಕರ ತಬ್ಲಾ ಗಾಯನವು ಸಭಿಕರನ್ನು ಸಂತೋಷಗೊಳಿಸಿತು. ಶ್ರೀ ಮೂಕಾಂಬಿಕಾ ಶಾಲೆಯವರ ವಿವಿಧ ವಿನೋದಾವಳಿಯೂ ಜನಮನವನ್ನೋಲೈಸಿತು.

ವಾಟರ್‌ಬರೀಸ್ ಕಾಂಪೌಂಡ್‌ಗೆ ವಂದನೆಗಳು — ಹೊಸ ಆರೋಗ್ಯ, ಹೊಸ ಶಕ್ತಿ, ಹೊಸ ಚೈತನ್ಯ ಅದರಿಂದ ದೊರೆತುವು.

ಮೇಲೆ ವಿವರಿಸಿದ ಅನುಭವವು ಉತ್ಪ್ರೇಕ್ಷೆಯಲ್ಲ—ವಾಟರ್‌ಬರೀಸ್ ಕಾಂಪೌಂಡನ್ನು ತಮ್ಮ ಮಕ್ಕಳಿಗೆ ಕೊಡುವ ಭಾರತೀಯ ತಾಯಂದಿರೆಲ್ಲರಿಗೂ ಆ ಅನುಭವವಿದ್ದೇ ಇದೆ. ಏಕೆಂದರೆ ಹೊಸ ಆರೋಗ್ಯ, ಶಕ್ತಿಗಳನ್ನು ಸ್ರಜೋದಿಸುವುದರಲ್ಲಿ ವಾಟರ್‌ಬರೀಸ್ ಕಾಂಪೌಂಡ್ ಅತ್ಯುತ್ತಮವಾದ ಟಾನಿಕ್ ಎಂಬುದು ಈಗಾಗಲೇ ತುಂಬಾ ಹಳೆಯ ಅನುಭವದ ಮಾತಾಗಿದೆ. ಅದರಲ್ಲಿ ಶರೀರಕ್ಕೆ ಪುಷ್ಟಿ ಮತ್ತು ನೋವಣೆಯನ್ನು ಕೊಡುವ ನೈಸರ್ಗಿಕ ವಸ್ತುಗಳು ಬೇಕಾದಷ್ಟಿವೆ. ಅವುಗಳಲ್ಲಿ ಪ್ರತಿಯೊಬ್ಬರ ಆರೋಗ್ಯರಕ್ಷಣೆಗೂ ಅತ್ಯವಶ್ಯಕವಾಗಿ ಬೇಕಾದ ಮಾಲ್ಟ್ ಮತ್ತು ಖನಿಜಪತ್ಥಗಳೂ ಕಬ್ಬಿಣ ಮತ್ತು ತಾಮ್ರದ ಅಂಶಗಳೂ ಇವೆ. ವಾಟರ್‌ಬರೀಸ್ ಕಾಂಪೌಂಡ್ ಸೇವಿಸಲು ತುಂಬಾ ಸವಿಯಾಗಿರುತ್ತದೆ. ಮಕ್ಕಳು ಅದನ್ನು ಪ್ರೀತಿಸುತ್ತಾರೆ. ಈ ದಿನವೇ ಒಂದು ಸೀಸೆ ಕೊಂಡುಕೊಳ್ಳಿರಿ. ಎರಡು ಸೈಜ್-೮ ಔನ್ಸ್ ಮತ್ತು ೧೬ ಔನ್ಸ್ ಸೀಸೆಗಳಲ್ಲಿ ಸಿಗುತ್ತದೆ

ವಾಟರ್ ಬರೀಸ್
ಕಾಂಪೌಂಡ್
ನಿಮ್ಮನ್ನು ಆರೋಗ್ಯದಲ್ಲಿಡುತ್ತದೆ